ಕರ್ನಾಟಕ ಸರಕಾರ

ಕಾವ್ಯ

ಶ್ರೀಮುಖ

033,1NRA
M3

ಯ್ಯಾರ ಕಿಞ್ಞಣ್ಣ ರೈ

CC-0. Jangamwadi Math Collection. Digitized by eGangotri

ಪ್ರಥಮ ವಿಶ್ವ ಕನ್ನಡ ಸಮ್ಮೇಳನ ಸಾಹಿತ್ಯ ಮಾಲೆ 1

033,1NRAx 897
M3

Rai, Kayyar Kiyyanna
Shreemukha.

CC-0. Jangamwadi Math Collection. Digitized by eGangotri

033,1NRAx 897
M3
SHRI JAGADGURU VISHWARADHYA JNANAMANDIR
(LIBRARY)
JANGAMAWADIMATH, VARANASI

*****

Please return this volume on or before the date last stamped.
Overdue volume will be charged ten paise per day.

CC-0. Jangamwadi Math Collection. Digitized by eGangotri

ಶ್ರೀ ಕಾಶೀ ಜಗದ್ಗುರು ವಿಶ್ವಾರಾಧ್ಯ ಜ್ಞಾನಸಿಂಹಾಸನದ
ಜ್ಞಾನ ಮಂದಿರಕ್ಕೆ ದಾವಣಗೆರೆ ಶ್ರೀ|| ಬಿ. ಎಂ. ಚನ್ನಬಸಯ್ಯನವರು
ಸಮರ್ಪಿಸಿದ್ದು.
ತಾ: 20-1-1988 ನೇ ಬುಧವಾರ

CC-0. Jangamwadi Math Collection. Digitized by eGangotri

ಶ್ರೀಮುಖ

ಕಯ್ಯಾರ ಕಿಞ್ಞಣ್ಣ ರೈ

SRI JAG... ...ADHYA
JNANA SIMHASAN J... ...AMANDIR
LIBRARY
Jangamawadi Math, Varanasi
Acc. No. 1006

ವಿಶ್ವ ಕನ್ನಡ ಸಮ್ಮೇಳನ
14/3ಎ, ನೃಪತುಂಗ ರಸ್ತೆ
ಬೆಂಗಳೂರು – 560 002

CC-0. Jangamwadi Math Collection. Digitized by eGangotri

Sreemukha — a collection of poems by Sri Kayyar Kinjyanna Rai, published by K.Jayacharya, K. A. S., Additional Director, Directorate of Kannada and Culture (Viṣwa Kannada Sammelana, 14/3A, Nrupathunga Road, Bangalore-560 002. —Pages VIII—76.

033,1NRAx
M3

© Kayyar Kinjyanna Rai

~~1006~~

Second edition 1983

5000 Copies

SRI JAGADGURU VISHWARADHYA
JNANA SIMHASAN JNANAMANDIR
LIBRARY.
Jangamwadi Math, VARANASI,
Acc. No. ....897 ~~1006~~

ಬೆಲೆ : ರೂ. 1–50

ಮುದ್ರಕರು :

ಲೋಟಸ್ ಪ್ರಿಂಟರ್ಸ್, 4ನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು–560 010

CC-0. Jangamwadi Math Collection. Digitized by eGangotri

ಆರ್. ಗುಂಡೂರಾವ್
ಮುಖ್ಯ ಮಂತ್ರಿ

ವಿಧಾನ ಸೌಧ
ಬೆಂಗಳೂರು
ದಿನಾಂಕ ೧೫-೯-೧೯೮೨

ಸಂಕಲ್ಪ....ಸಿದ್ಧಿ

ಸುಮಾರು ಎರಡು ಸಾವಿರ ವರ್ಷಗಳಿಗೂ ಹೆಚ್ಚು ದೀರ್ಘವಾದ ಐತಿಹಾಸಿಕ ಪರಂಪರೆ ಕನ್ನಡ ನಾಡಿನದು. ಈ ಅವಧಿಯಲ್ಲಿ ಕನ್ನಡ ಭಾಷೆ, ಸಾಹಿತ್ಯ, ಕಲೆ, ಸಂಸ್ಕೃತಿಗಳು ಸಮೃದ್ಧವಾಗಿ, ಶ್ರೀಮಂತವಾಗಿ ಬೆಳೆದು, ಈ ನಾಡಿನ ಇತಿಹಾಸವನ್ನು ಭವ್ಯವಾಗಿಸಿವೆ.

ಒಂದು ನಾಡಿನ ಅಂತಃಸತ್ವ ಅಡಕವಾಗಿರುವುದೇ ಅದರ ಸಾಂಸ್ಕೃತಿಕ ನೆಲೆ ಗಟ್ಟಿನಲ್ಲಿ. ಈ ನೆಲೆಗಟ್ಟು ಭದ್ರವಾಗಿರಬೇಕಾದರೆ ಸಾಂಸ್ಕೃತಿಕ ಪರಂಪರೆ ಉತ್ಕರ್ಷಕ್ಕೆ ಏರಲು, ಔನ್ನತ್ಯ ಸಾಧಿಸಲು ನಿರಂತರವಾಗಿ ಪ್ರಯತ್ನಗಳು ನಡೆಯಬೇಕು.

ಭಾರತೀಯ ಸಂಸ್ಕೃತಿಯಲ್ಲಿ ಹಾಸುಹೊಕ್ಕಾಗಿ ಬೆಸೆದುಕೊಂಡಿದ್ದರೂ ಕನ್ನಡ ತನ್ನದೇ ಆದ ವಿಶಿಷ್ಟ ಸಂಸ್ಕಾರಗಳನ್ನು, ಸಂಸ್ಕೃತಿಯನ್ನು ಹೊಂದಿದೆ.

ಕನ್ನಡ ನಾಡಿನ ಭವ್ಯ ಪರಂಪರೆಯನ್ನು ಜಾಗತಿಕ ಹಿನ್ನೆಲೆಯಲ್ಲಿ ಚಿತ್ರಿಸಿ, ವಿಶ್ವಕ್ಕೆ ಕನ್ನಡ ಸಂಸ್ಕೃತಿಯ ಹಿರಿಮೆಯನ್ನು ಸಾರುವ ಸದುದ್ದೇಶದಿಂದ ಪ್ರಥಮ ವಿಶ್ವ ಕನ್ನಡ ಸಮ್ಮೇಳನವನ್ನು ಕರ್ನಾಟಕದ ಪ್ರಮುಖ ಸಾಂಸ್ಕೃತಿಕ ಕೇಂದ್ರವಾದ ಮೈಸೂರಿನಲ್ಲಿ ಏರ್ಪಡಿಸಿದ್ದೇವೆ. ಇದೊಂದು ಚರಿತ್ರಾರ್ಹವಾದ ಸಂದರ್ಭವೆಂದು ನನ್ನ ನಂಬಿಕೆ. ಈ ಚರಿತ್ರಾರ್ಹ ಸಮ್ಮೇಳನ ಸಾರ್ಥಕವಾಗಲು ಮತ್ತು ಬಹುಕಾಲ ಇದರ ಸವಿ ನೆನಪು ಉಳಿಯಲು ಹಲವು ಯೋಜನೆಗಳನ್ನು ರೂಪಿಸಿದ್ದೇವೆ. ಕನ್ನಡದ ಖ್ಯಾತ ಲೇಖಕರ ಮಹತ್ವದ ಕೃತಿಗಳನ್ನು ಪ್ರಕಟಿಸಿ ಸುಲಭ ಬೆಲೆಗೆ

CC-0. Jangamwadi Math Collection. Digitized by eGangotri

ಒದಗಿಸುವುದು ಈ ಯೋಜನೆಗಳಲ್ಲಿ ಒಂದು. ಇದರಂತೆ ಒಂದುನೂರಾ ಎರಡು ಕೃತಿಗಳನ್ನು, ಹದಿನೇಳು ಸಂಕಲನಗಳನ್ನು ಆಯ್ಕೆ ಮಾಡಿ ಪ್ರಕಟಿಸುತ್ತಿದ್ದೇವೆ. ಈ ಸಾಹಿತ್ಯ ಮಾಲಿಕೆಯಲ್ಲಿ ಕವನ, ಕಾದಂಬರಿ, ನಾಟಕ, ವಿಚಾರ ಸಾಹಿತ್ಯದ ಕೃತಿಗಳಲ್ಲದೆ ಕನ್ನಡ ಸಾಹಿತ್ಯದ ಸತ್ವವನ್ನು, ವೈವಿಧ್ಯವನ್ನು ಪ್ರತಿಫಲಿಸುವ ವಿವಿಧ ಬಗೆಯ ಸಂಕಲನಗಳು ಇವೆ. ಅನ್ಯ ಭಾಷಿಕರಿಗೆ ಕನ್ನಡ ಸಾಹಿತ್ಯದ ಕಂಪು ಬೀರುವಂತೆ ಕೆಲವು ಆಯ್ದ ಕೃತಿಗಳ ಇಂಗ್ಲಿಷ್ ಭಾಷಾಂತರವನ್ನು ಕೂಡ ಪ್ರಕಟಿಸುತ್ತಿದ್ದೇವೆ. ಸಾಹಿತ್ಯ ಮಾಲೆಯ ಈ ಕೃತಿರತ್ನಗಳನ್ನು ಸಹೃದಯವಾಚಕರು ಓದಿ ಆಸ್ವಾದಿಸಿದರೆ ನಮ್ಮ ಶ್ರಮ ಸಾರ್ಥಕ ; ಸಮ್ಮೇಳನ ಅರ್ಥಪೂರ್ಣವಾಗುವುದೆಂದು ನನ್ನ ಅಭಿಲಾಷೆ.

ಈ ಕೃತಿಗಳನ್ನು ಆಯ್ಕೆಮಾಡುವಲ್ಲಿ ಸಾಹಿತ್ಯ ಸಮಿತಿಯ ಪರಿಣತ ಸದಸ್ಯರು ಸಾಕಷ್ಟು ಶ್ರಮಿಸಿದ್ದಾರೆ. ಸುದೈವದಿಂದ ಕನ್ನಡದಲ್ಲಿ ಪ್ರತಿಭಾವಂತ ಲೇಖಕರ ಅಮೂಲ್ಯ ಕೃತಿಗಳಿಗೆ ಕೊರತೆ ಇಲ್ಲ. ಈ ಹಿನ್ನೆಲೆಯಲ್ಲಿ ನಿಶ್ಚಿತ ಸಂಖ್ಯೆಯಲ್ಲಿ ಸಾಹಿತ್ಯ ಕೃತಿಗಳನ್ನು ಆಯ್ಕೆ ಮಾಡುವುದು ಸುಲಭದ ಕೆಲಸವಲ್ಲ. ಆದರೂ ಬಹುಜನರಿಗೆ ಒಪ್ಪಿಗೆಯಾಗುವಂತೆ ಸಾಹಿತ್ಯ ಸಮಿತಿ ತನ್ನ ಕರ್ತವ್ಯ ನಿರ್ವಹಿಸಿದೆಯೆಂದು ಭಾವಿಸುತ್ತೇನೆ. ಈ ಸಮಿತಿಗೆ ಕೃತಜ್ಞತೆಗಳನ್ನು ಅರ್ಪಿಸುವುದು ನನ್ನ ಕರ್ತವ್ಯ. ಈ ಕೃತಿಗಳನ್ನು ಪ್ರಕಟಿಸಲು ಅನುಮತಿ ನೀಡಿ, ಲೇಖಕರು ಉಪಕರಿಸಿದ್ದಾರೆ. ಅವರ ಉದಾರ ಉಪಕಾರವನ್ನು ಈ ಸಂದರ್ಭದಲ್ಲಿ ಕೃತಜ್ಞತಾಪೂರ್ವಕವಾಗಿ ನೆನೆಯುತ್ತೇನೆ.

ಈ ಗ್ರಂಥಮಾಲೆ ಕನ್ನಡಿಗರ ಮನಸ್ಸನ್ನು ತಟ್ಟಿ, ಹೃದಯಸ್ಪಂದನ ಮಾಡಿದರೆ ನಮ್ಮ ಸಂಕಲ್ಪಕ್ಕೆ ಸಿದ್ಧಿ ದೊರಕಿದಂತೆ. ಈ ಪ್ರಯತ್ನ 'ನಭೂತೋ' ಎಂದು ಹೆಮ್ಮೆಯಿಂದ ಹೇಳಬಲ್ಲೆ. ತಾಯಿ ಭುವನೇಶ್ವರಿ ಈ ಪ್ರಯತ್ನವನ್ನು ಹರಸಿ, ಮಂಗಳವುಂಟುಮಾಡಲೆಂದು ವಿನೀತ ಪ್ರಾರ್ಥನೆ ಸಲ್ಲಿಸುತ್ತೇನೆ.

ರಾ. ಗುಂಡೂರಾವ್

ಮುಖ್ಯ ಮಂತ್ರಿಗಳು

CC-0. Jangamwadi Math Collection. Digitized by eGangotri

ಪರಿವಿಡಿ

೧.	ಶ್ರೀಮುಖ	...	೧
೨.	ಹಾಡುವ ಹಕ್ಕಿಗೆ	...	೪
೩.	ದಾರಿಗಾ	...	೬
೪.	ಪಥಿಕ–ಯುವಕ	...	೮
೫.	ಬೆರೆವೆ ನಾನು ನನ್ನ ಜಗದಿ	...	೯
೬.	ಏಕೆ	...	೧೦
೭.	ರಣನಾದ	...	೧೧
೮.	ಜಾಗೃತಿ	...	೧೪
೯.	ವಿಶ್ವಗರ್ಭದ ಗೋಳು	...	೧೭
೧೦.	ಉಪವಾಸ	...	೨೦
೧೧.	ಚಿನ್ನ ಕನಸು ಕಂಡೆನೊಂದು	...	೨೨
೧೨.	ಗಾಂಧೀ ದರ್ಶನ	...	೨೪
೧೩.	ಗಾಂಧೀಜಿಗೆ	...	೨೭
೧೪.	ಅವನೇ	...	೨೮
೧೫.	ನೀನು ನನ್ನ ಭಾವನೆಯಲಿ	...	೩೭
೧೬.	ಪೊಸಡಿಗುಂಪೆ	...	೩೪
೧೭.	ತುಳುನಾಡಿತಿ	...	೩೬
೧೮.	ಭ್ರಮರ ಗೀತೆ	...	೪೧
೧೯.	ವಿರಹಿಣಿ	...	೪೬
೨೦.	ಊರ್ಮಿಳಾ	...	೪೯
೨೧.	ಶೂದ್ರಕಗೆ	...	೫೩
೨೨.	'ಬೇಡುವೆಂ ಚಂದ್ರವಂಶದ ಕುಡಿಯ ಕಾಪಾಡು'		೫೪
೨೩.	ವೇದವ್ಯಾಸಗೆ	...	೬೫
೨೪.	ಸ್ವಗತ	...	೬೬
೨೫.	ಹೊಸ ಹಾಡು	...	೭೫

CC-0. Jangamwadi Math Collection. Digitized by eGangotri

CC-0. Jangamwadi Math Collection. Digitized by eGangotri

ಶ್ರೀಮುಖ

CC-0. Jangamwadi Math Collection. Digitized by eGangotri

CC-0. Jangamwadi Math Collection. Digitized by eGangotri

ಶ್ರೀಮುಖ

ಆರ್ಯರೋ, ಮೊಗಲರೋ, ಕ್ರೈಸ್ತರೋ, ತಡೆಯೇನು ?
ಎಲ್ಲರೂ ಬರಲೆಂದು ಸ್ವಾಗತಿಸಿದೆ;
ಜಾತಿ ಮತ ಬೇರೆನದೆ ಬಣ್ಣ ನುಡಿ ಬದಲೆನದೆ
ಭೇದವೆಣಿಸದೆ ತಾಯೆ ! ನೀ ಸಲಹಿದೆ.

ವಿಶ್ವಸಂತತಿಯೆಲ್ಲ ನಿನ್ನ ಪುಣ್ಯೋದರದ
ಹಸುಕೂಸುಗಳುಯೆಂದು ಹಾಲುಣಿಸಿದೆ ;
ಒಂದೆ ತೊಟ್ಟಿಲೊಳಿಟ್ಟು ತೂಗಿ ಶೋಭನವಾಗಿ
ಪ್ರೇಮಸಂಗೀತದೊಳೆ ಮೆಯ್ಮರಸಿದೆ.

೨

ನಿನ್ನೆದೆಯ ಹಾಲುಂಡು, ದಿವ್ಯ ಚೇತನಗೊಂಡು,
ಮನುಜಸಂತತಿಯೆನಿತು ಬಾಳಲಿಲ್ಲ ?
ನಿನ್ನ ಪಾಲನೆಯಲ್ಲಿ ಜೀವ ಭಾವಗಳರಳಿ
ಎನಿಬರಮಿತಾನಂದ ತಾಳಲಿಲ್ಲ ?

ನಿನ್ನ ಕೈತುತ್ತಿನಲಿ ವಜ್ರದೇಹಿಗಳಾಗಿ
ಎನಿತು ವಂಶಜರು ಮುಗುಳೇಳಲಿಲ್ಲ ?
ನಿನ್ನ ಹರಕೆಯ ಪಡೆದು ಧೈರ್ಯ ಸಾಹಸ ಹಿಡಿದು
ವೀರರೆನಿಬರು ರಾಷ್ಟ್ರವಾಳಲಿಲ್ಲ ?

೩

ಕುರುಡು ಕತ್ತಲೆಯಲ್ಲಿ ಜಗವೆ ಕಂಗೆಡುತಿರಲು
ನೀನೆ ತಿಳಿವಿನ ಬೆಳಕನೆತ್ತಿತೋರ್ದೆ;

CC-0. Jangamwadi Math Collection. Digitized by eGangotri

ಪಾಷಾಣಹೃದಯಿಗಳು ಪಶುಯಜ್ಞಕಿಳಿದಿರಲು
ಹಿಂಸೆ ಸಲ್ಲದುಯೆಂದು ನೀತಿಸಾರ್ದೆ ;

ಬೇನೆಯೋ, ಬೇಗುದಿಯೋ, ಸಂಕಟವೆ ಬಂದಿರಲಿ
ಸಹನೆ ಮೀರದಿರೆಂದು ಬುದ್ಧಿಯೊರೆದೆ ;
ಧರ್ಮವನು, ಕರ್ಮವನು, ಸತ್ಯವನು, ತತ್ವವನು,
ಎಲ್ಲವನು ಜಗಕಿಂತು ಧಾರೆಯೆರೆದೆ !

೪

ವಿಂಧ್ಯ ಹಿಮಗಿರಿಗಳುನ್ನತಿಯ ಮೀರಿತು, ಮಾತೆ !
ನಿನ್ನ ಘನತೆಗೆ ಲೋಕ ಬೆರಗಾಯಿತು !
ಗಂಗಾ ಸರಸ್ವತೀ ಯಮುನಾ ಪ್ರವಾಹಗಳ
ಮೀರಿ ತವ ಸಂಸ್ಕೃತಿಯು ನೆರೆ ಹರಿಯಿತು !

ಸೂರ್ಯ ಚಂದ್ರರಿಗೆಲ್ಲ ಪ್ರಭೆಯನಿತುಯಿರಲಿಲ್ಲ
ನಿನ್ನ ಕೀರ್ತಿಜ್ಯೋತಿ ಪ್ರಜ್ವಲಿಸಿತು !
ಮೇಘಮಂಡಳವೇರಿ ವಿಜಯವೀರಧ್ವಜವು
ಸ್ವಾತಂತ್ರ್ಯ ಸಂಭ್ರಮದಿ ಸಂಚಲಿಸಿತು !

೫

ಹಾ ! ಪ್ರಮಾದಗಳಾಯ್ತೆ ? ಜಡನಿದ್ರೆ ಹಿಡಿದಿತ್ತೆ ?
ಸೂರೆಯಾಯಿತೆ ಸೊತ್ತು, ಸುಲಿಗೆಯಾಯ್ತೆ ?
ನಿನ್ನ ನೆಳಲಂ ಪಡೆದು ಬದುಕಿ ಬಲಗೊಂಡವರೆ
ಹಂತ ! ತುಳಿದರೆ ತಲೆಗೆ ಮಕುಟ ಮಣಿ ಬಿತ್ತೆ ?

ಅವಮಾನಗಳನಿಂತು ಶತಮಾನ ಸಹಿಸಿದಾ !
ಶಕ್ತಿಭೈರವಿ ಜನನಿ ! ತಾಳ್ಮೆಯುಂಟೆ ?
ಕ್ಷಮೆಯು ಮೀರದೆ ನೋವು ; ಶಕ್ತಿಪುತ್ರರು ನಾವು
ಹರಸಿಬಿಡು ! ತೆರಳುವೆವು ತಡೆವರುಂಟೆ ?

CC-0. Jangamwadi Math Collection. Digitized by eGangotri

ಒಮ್ಮತದೊಳೇಕಪಂಥವ ಹಿಡಿದೆ ಸಾಗುವೆವು–
ಸೋದರರು, ಕ್ಷಮಿಸಮ್ಮ ! ಬಡಿದಾಡೆವು ;
ಹೊಸ ಜಗದ ನಿರ್ಮಾಣದೀ ಸಂಧಿಕಾಲದಲಿ
ನಿನ್ನ ಘನತೆಗೆ ಕೊರತೆಯಾಗಬಿಡೆವು.

ಹಸುರುಡಿಗೆ ಪಸೆದುಟ್ಟು, ಸಿರಿಮುಡಿಗೆ ಹೂತೊಟ್ಟು,
ಭುವನೇಶ್ವರಿಯೆ ! ನೀನು ಮೆರೆಯಬೇಕು ;
ಶುಭದಿನದ ಹೊಸಬೆಳಕಿನಾನಂದಶೋಭೆಯಲಿ
ನಿನ್ನ ಶ್ರೀಮುಖವೊಮ್ಮೆ ನೋಡಬೇಕು.

CC-0. Jangamwadi Math Collection. Digitized by eGangotri

ಹಾಡುವ ಹಕ್ಕಿಗೆ

ಆತ್ಮಸಾಂದ್ರಾನಂದ—
ಲಾಸ್ಯಲಹರಿಯು ಹಕ್ಕಿ
ಏನ ಜಾನಿಸಿ ಮುನ್ನ
ಹಾಡುತಿಹುದೊ ?

ಆವಿಷ್ಕೃತಾಮೋದ—
ದಾವೇಗದಿಂ ಸೊಕ್ಕಿ
ಏತಕಣಕಿಸುತೆನ್ನ
ಕಾಡುತಿಹುದೊ ?

ಆದ್ಯಂತವರಿಯಂದಿಹ
ಸ್ವಪ್ನಸಂತಸವುಕ್ಕಿ
ತನ್ನ ತಾ ಮರೆವನ್ನ
ಹಾಡಲಿಹುದೋ ?

ನಿನ್ನ ಬಳಿ ಬಹೆನೆಂದು
ತನ್ನ ನೆಲೆಯೊಳು ನಿಂದು
ಸನ್ಮತಿಯೊಳುನ್ನತನ
ಬೇಡುತಿಹುದೋ ?

ಚಿಂತೆಸಂತೆಯನಿರಿಸಿ
ದುಃಖತಂತಿಯಮಿಡಿಸಿ
ವ್ಯರ್ಥಬಾಳದಿರೆಂದು
ಆಡುತಿಹುದೊ ?

CC-0. Jangamwadi Math Collection. Digitized by eGangotri

ಸ್ವರ್ಣ ಸುಖಕಿದೆ ರೀತಿ
ಪುಣ್ಯಪದಕವು ಪ್ರೀತಿ
ಜಯಜೀವನದ ಜ್ಯೋತಿ
ಜೋಡಿಸುವುದೊ ?

ಹಕ್ಕಿ! ಹಾಡೆಲೆ ಹಾಡ
ಹಾಡ ಬೀಡನೆ ಮಾಡ
ಅಲ್ಲಿ ಜೋಡಿಸಿ ನೋಡ
ಧನ್ಯ ಜೀವಿಯ ಗೂಡ.

———

CC-0. Jangamwadi Math Collection. Digitized by eGangotri

ದಾರಿಗಾ

ಎತ್ತಣಿಂದೈತಂದೆ ?
ಗೊತ್ತುಗುರಿಯಿಲ್ಲದೆಯೆ
ಸುತ್ತಿಸುಳಿಯುತ್ತಿಹೆಯೆಲೋ ದಾರಿಗಾ !

ಆವನಾದೇಶಕಂ–
ತೀವಿಧದ ಭ್ರಮಣೆಯಿಂ
ನೋವನಾನುವೆ ಹೇಳೆಲೋ ದಾರಿಗಾ !

ಕುಂಟುತ್ತೈದುವೆಯೇಕೆ ?
ನೆಂಟರಿಲ್ಲವೆ ನಿನಗೆ ?
ಒಂಟಿಯಶಾಳಾಗಿಹೆಯೆಲೋ ದಾರಿಗಾ !

ಭೂರಿ ಕತ್ತಲೆಯಲ್ಲಿ !
ತೋರುವವನಿಲ್ಲದಿರೆ,
ಸಾರಲೇಂ ಫಲವಿಹುದೆಲೋ ದಾರಿಗಾ ?

ಹೋಗೆಂದು ಹೇಳಿದನೆ ?
ಆಗು ಹೋಗುಗಳ ನೀ–
ನಾಗ ಚಿಂತಿಸಲಿಲ್ಲವೇ ದಾರಿಗಾ ?

ತನ್ನ ಬುದ್ಧಿಯ ಬಲದ,
ಮುನ್ನಡೆಯುವಾ ಛಲದ
ಉನ್ನತಿಕೆಯಿಲ್ಲವಿಲ್ಲೇಂ ದಾರಿಗಾ ?

ನೇರಾದ ದಾರಿಯನು
ಸೇರಲರಿವಿಹುದೇನು ?
ಸಾರು ಸೇರ್ದೈ ಗುರಿಯನೇ ದಾರಿಗಾ !

CC-0. Jangamwadi Math Collection. Digitized by eGangotri

ಆದರಾಲಿಸು ಸೊಲ್ಲ :
ಹೋದ ಹಾದಿಯದಲ್ಲ–
ಸಾಧನೆಗೆ ಸಜ್ಜಾಗೆಲೋ ದಾರಿಗಾ !

ಪೌರುಷ ಪರಾಕ್ರಮದಿ
ವೀರ ! ಭವರಂಗದಲಿ
ಹೋರಾಡಿ ಜಯಪದವಿ ಪಡೆ ದಾರಿಗಾ !

ಕಟ್ಟಿ, ಕೆಡಿಸಲು ಬಹುದು,
ಗುಟ್ಟು, ಗುಡಿಸಲು ಬಹುದು ;
ಕಷ್ಟಗಳ ನೀಗಿ ಸಾಗೈ ದಾರಿಗಾ !

ಬೆಂದು ಬಾಡಿದ ಜೀವ
ಎಂದು ನೀಗಲಿ ನೋವ ?
ಹೊಂದು ನೀ ಸುಖಭಾವ ನಡೆ ದಾರಿಗಾ !

ಕೊನೆಗಾಣಲೀ ಪಥದಿ
ಘನದ ಕಾರ್ಯವನೇನ–
ನೆನೆದಿರುವೆ ? ತಿಳಿದಿಲ್ಲವೇ ದಾರಿಗಾ ?

ಎಲ್ಲವನು ತಿಳಿದಾತ–
ನಲ್ಲೊರ್ವನಿಹನೆಂದು
ಬಲ್ಲವರು ಹೇಳುವರು–ಕೇಳ್–ದಾರಿಗಾ !

ಆತನಿದ್ದರೆ–ಕೇಳು :
ಏತಕೆಂದೀ ಬಾಳು ?
ಭೀತಿಯಂ ಬಿಟ್ಟೇಳು ನಡೆ ದಾರಿಗಾ !

ಕೇಳಿ ಕಲಿತೆಲ್ಲವನು,
ಬಾಳ ಬೆಳಗಲು ಬಲಿತ–
ಆಳಾಗಿ ಬಾ ಮರಳಿ ನಡೆ ದಾರಿಗಾ !

CC-0. Jangamwadi Math Collection. Digitized by eGangotri

ಪಥಿಕ-ಯುವಕ

ಕತ್ತನೆತ್ತಿ ನಡೆಯುತ್ತಿರಲು
ಸುತ್ತು ಮುತ್ತು ನೋಡದಿರಲು
ಎಡವಿ ಬಿದ್ದರೇನದೊಮ್ಮೆ ?
ಅಡಗದೆಂದು ನಡೆವ ಹೆಮ್ಮೆ.
ಪಥಿಕ ! ದಾರಿಬಿಡದೆಯೆ
ಮೊದಲ ಬಾರಿ ಕೆಡೆದೆಯೆ ?
(ಹೋಗು ಸಾಗು ಬೆಚ್ಚದೆ ;
ಎದೆಯ ಧೃತಿಗೆ ಮೆಚ್ಚಿದೆ !)

* * *

ಬಾಳಬೆಳಕು ಬೆಳಗಲೆಂದು
ಮನದಿ ಹುಚ್ಚು ಹೆಚ್ಚಿದಂದು
ಊದ ಹೋಗಿ ಮುಖಕೆ ಸಿಡಿದ
ಬೆಂಕಿ ಕಿಡಿಗೆ ಬೆಂಕಿವಡೆದ
ಯುವಕ ನಿನ್ನ ಸಾಹಸವನು
ನೆನೆಯುತನಿಶ ಮೋಹಿಸುವೆನು !
(ಅಪ್ಪುದೆಂದು ತಪ್ಪದು ;
ತಪ್ಪದೊಂದು ಒಪ್ಪದು.)

CC-0. Jangamwadi Math Collection. Digitized by eGangotri

ಬೆರೆವೆ ನಾನು ನನ್ನ ಜಗದಿ

ಬರುವ ಬಾಳುವೆಯನು ನೀನು
ಗುರುತಿಸಯ್ಯ ನಿನ್ನ ಪಟದಿ ;
ಇರವನರಿತು ಪ್ರಕೃತಿಯೊಡನೆ
ಬೆರೆವೆ ನಾನು ನನ್ನ ಜಗದಿ.

ಇಂದುಯೆಂಬುದೆನ್ನಧೀನ
ನಾಳೆ ನಿನ್ನದಾಗಲೇನು ?
ಇಂದು ದೊರೆತ ಸುದಿನವನ್ನು
ವ್ಯರ್ಥ ಕಳೆವೆನೆ ?

ಪ್ರಕೃತಿಯಮ್ಮ ನಡಿಯ ಬುಡದಿ
ಬೊಂಬೆಯಾದೆನು ;
ಬೊಂಬೆಯಾಟದಂತ್ಯದಲ್ಲಿ
ಬಿಂಬವಿರ್ಪೆನು ;
ಬಿಂಬವಾಗಿ ಕಡೆಗೆ ತಾನೆ
ಶೂನ್ಯನಪ್ಪೆನು ;
ಶೂನ್ಯತೆಯಲ್ಲಿ ಕೊನೆಗೆ ಜಗದ
ಸಾರ ತೋರ್ಪೆನು.

ಬರುವ ಬಾಳುವೆಯನು ನೀನು
ಗುರುತಿಸಯ್ಯ ನಿನ್ನ ಪಟದಿ ;
ಇವರನರಿತು ಪ್ರಕೃತಿಯೊಡನೆ
ಬೆರೆವೆ ನಾನು ನನ್ನ ಜಗದಿ

CC-0. Jangamwadi Math Collection. Digitized by eGangotri

ಏಕೆ

ಕಾಣದಿಯ ದಾರಿಯಲಿ
ಮುಂದಿರುವ ಕಷ್ಟಗಳ
ಇಂದು ನೆನೆಯುತ ನೀನು ಮರುಗಲೇಕೆ ?

ಇಂದು ನಿನ್ನಯ ಗತಿಯು
ಜೀವನದ ಸಂಸ್ಕೃತಿಯು
ಬೆಂದೊಡಲ ಬೆಂಕಿಯಲಿ ದಹಿಸಲೇಕೆ ?

ಸರಳತೆಯ ದಾರಿಯಲಿ
ಚಿಂತೆಸಂತೆಯನಿರಿಸಿ
ನಿತ್ಯದಾನಂದವನು ಕೆಡಿಸಲೇಕೆ ?

ನಾಲೆಯೆಂಬುದು ವಿಕೃತಿ
ಇಂದು ಬಂದಿದೆ ಪ್ರಕೃತಿ
ಪ್ರಕೃತಿಯನು ವಿಕೃತಿಯೊಳು ಮುಚ್ಚಲೇಕೆ ?

ನಾಳೆ ಸುಖವಿಲ್ಲೆಂದು
ಇಂದು ಚಿಂತಿಸಬೇಡ
ಇಂದಿನೊಳು ನಾಳೆಯನು ಬೆರೆಸಲೇಕೆ ?

ಈ ಕ್ಷಣವು ನಗುತಿರಲು
ಈ ದಿನವು ಸುಖವಿರಲು
ಬಾಳ್ವೆ ಬೆಳಗುವುದೆಂದು ಮರೆಯಲೇಕೆ ?

ಕಾಣದಿಹ ದಾರಿಯಲಿ
ಮುಂದಿರುವ ಕಷ್ಟಗಳ
ಇಂದು ನೆನೆಯುತ ನೀನು ಮರುಗಲೇಕೆ ?

CC-0. Jangamwadi Math Collection. Digitized by eGangotri

ರಣನಾದ

ಭೀಷಣಾದ್ಭುತ ಘೋಷ
ಪ್ರಳಯ ಭೈರವ ರೋಷ
ಭುಗಿಲೆಂದು ಕಿಡಿಗರೆದು
ಜಗದ ಜೀವವನರೆದು
ಜ್ವಲಿಸಿ ಧಗಧಗಿಸುತಿದೆ
ಲೋಕಾಂತ ನಡುಗುತಿದೆ.

ಗುಡುಗು ಸಿಡಿ ಮಿಂಚುಗಳೊ
ವಿಷಯ ವಿಷಧಾರೆಗಳೊ
ಜೀವ ಸಂಸ್ಕೃತಿಗಳಿಗೆ
ಹಾ ! ಬಂತೆ ವಿಷಗಳಿಗೆ ?
ದಳ್ಳುರಿಯು ದಹಿಸುತಿದೆ !
ಕಲ್ಲೊಡೆದು ಕರಗುತಿದೆ ! !

ಸರ್ವ ಸ್ವಾಹಾಯಜ್ಞ–
ಕಿಡೊ ! ಕಾಲ ಸರ್ವಜ್ಞ
ಸಂಪೂರ್ಣ ಸನ್ನದ್ಧ–
ನಾಗಿರುವುದು ಸಿದ್ಧ !
ಅಡಗಲಿಕೆ ತಳವಿಲ್ಲ
ನಡುಗುವುದು ತರವಲ್ಲ !

ಹೃದಯ ಬಂಧುರ ಭಾವ
ಸದಯ ಸೋದರ ಜೀವ
ಶಾಂತಿ ನೀತಿಗಳಿಲ್ಲ
ಸತ್ಯ ಧರ್ಮಗಳೆಲ್ಲ !

CC-0. Jangamwadi Math Collection. Digitized by eGangotri

ಆಕಟ ! ಪಾರುಷ್ಯದಲಿ
ಸಹಿಸದೆಯೆ ದಹಿಸುತಿದೆ !

ಲೋಕವಮಾರಣಕೆಂದು
ಪಂಥಪೂರಣೆಯಹಾಯ್ತೆ ?
ಕಲಹ ಕಾರಣವೇನು ?
ದಗ್ಧ ಧೋರಣೆ ಬಂತೆ ?
ರಕ್ತರಣ ತೃಷ್ಣೆಯನು
ಕೊನೆಗೊಳಿಸಬಹುದೇನು ?

ಈ ಪಾಪಿ ಜನಗಳಲಿ
ನೈಷ್ಠುರ್ಯವೆಷ್ಟಿದೆಯೊ ?
ಈ ಕಠಿಣ ಕಾರ್ಯದಲಿ
ಜಗವೇಕೆ ಬಿಗಿದಿದೆಯೊ ?
ಅವಸಾನಕೀ ಬುದ್ಧಿ
ವಿಪ್ಲವಕಿದೇ ಸಿದ್ಧಿ !

ರಕ್ಕಸರ ರಾಜ್ಯದಲ್ಲಿ
ದೇವ ನಿಲ್ಲುವುದುಂಟೆ ?
ಈ ವನ್ಯನಿಯಮದಲಿ
ನ್ಯಾಯ ಕೇಳುವರುಂಟೆ ?
ಸತ್ಯಕ್ಕೆ ಜಯವೆಲ್ಲಿ ?
ಧರ್ಮಕ್ಕೆ ನೆಲೆಯೆಲ್ಲಿ ?

ದಯೆ ಸತ್ಯ ಶಾಂತಿಗಳ
ಎದೆಗೊಪ್ಪಿಕೊಂಡಿರಲಂ
ವಿಷದುರಿ ಶತಘ್ನಿಗಳ
ತಡೆಯಬಹುದೇ ಹೇಳು ?

CC-0. Jangamwadi Math Collection. Digitized by eGangotri

ಕೆರಳಿನಿಂತಿಹರೆಲ್ಲ
ತತ್ವಕ್ಕೆ ಬೆಲೆಯಿಲ್ಲ !

ಆತ್ಮ ರಕ್ಷಣೆ ಗೈವ
ತ್ರಾಣವಿರಲಿಲ್ಲೆಂದು
ಈ ಮಂದಿಗದರಿಂದ
ದುರ್ಮರಣವಾಯ್ತೆಂದು
ಜಗವೆ ನಿಂದಿಸದಿರಲಿ !
ರಣನಾದ ಕೇಳಿರಲಿ !

CC-0. Jangamwadi Math Collection. Digitized by eGangotri

ಜಾಗೃತಿ

ಎಚ್ಚರವು ! ಎಚ್ಚರವು ! ವೀರಪುತ್ರರೆ ಬೇಗ
ಜಾಡ್ಯ ದುಃಸ್ವಪ್ನಗಳ ಕಾಲ ಕಳೆದತ್ತು ;
ಎಚ್ಚತ್ತು ಕಣ್ಣಾಲಿ ಬಿಚ್ಚುತ್ತ ನೋಡೀಗ
ಮೌನ ಸನ್ಯಾಸಕಿಹ ದಿನವದುರುಳಿತ್ತು.

ಎಚ್ಚರಿನ ಸಮಯಮಿದು ಕಾಳಿಮೆಯ ಕುರುಹಿಲ್ಲ
ಆತ್ಮಶಕ್ತಿಯ ಸತ್ಪ್ರಕಾಶ ಪಸರಿಸಿದೆ ;
ಮಾಯಕದ ಮಾಲಿನ್ಯ ಭಯಭೀತಿಯುಳಿದಿಲ್ಲ
ಎಲ್ಲೆಲ್ಲು ಜಾಗೃತಿಯ ಜನತೆ ಜನ್ಮಿಸಿದೆ.

ಸುತ್ತಲೂ ಜಗವೆಲ್ಲ ಮಿಗವಕ್ಕಿ ಮರವೆಲ್ಲ
ಎಚ್ಚರಿನೊಳೆಚ್ಚತ್ತು ಕೂಗಿಡುತಲಿಹವು ;
ಪಾಷಾಣ ಪಶುಹೃದಯವನೆ ಕಹಳೆ ಕೆರಳಿಸಿರೆ,
ವೀರಕಲೆ ಹೊರಹೊಮ್ಮಿ ಮಾರ್ದನಿಸುತಿಹವು !

ಪಾಶವಿಕ ಶಕ್ತಿಯನು ಕಾಲಡಿಗೆ ನುಗ್ಗೊತ್ತಿ
ಸ್ವಾತಂತ್ರ್ಯ ಸತ್ಯ ಶೋಧನೆಗೆ ಮುಂಬರಿದು ;
ನೋಡಿರದೊ ! ಬಾಡಿರದೆ ನಗೆಮೊಗದೆ ಹಿಗ್ಗೊತ್ತಿ,
ವಿಶ್ವತೋಮುಖವಾಗಿ ಕಹಳೆ ಕೂಗುವುದು.

ಎಂತಾದರೇನಾದರೊಂದೆ ಲಕ್ಷ್ಯದ ಸಿದ್ಧಿ-
ಗಾಗಿ ಮುನ್ನಡೆವರೀ ಸಾಹಸಿಕರು ;
ಪಂತದ ಪರಾಕ್ರಮವ ಸತ್ಯಶಕ್ತಿಯೊಳದ್ದಿ
ನಿತ್ಯ ನಿರ್ಮಲ ಕೀರ್ತಿ ಪಡೆಯಲಿಹರು !

CC-0. Jangamwadi Math Collection. Digitized by eGangotri

ಸೂರೆಯಹಾಯಿತು ಸೊತ್ತು, ಸರ್ವಸುಖ ಸಂಪತ್ತು !
ಮಾನ್ಯಮಾತೆಗೆ ಕಣ್ಣನೀರ ಕೈತುತ್ತು !
ಇಂತಾದರೂ ಕೆಲರು—ಮುಸುಕಿಕ್ಕಿ ಮಲಗಿಹರೆ ?
ಹಾ ಹಂತ ! ಇವರೆಂದಿಗೆಚ್ಚರೊಂದುವರು ?

ನಿತ್ಯನಿದ್ರೆಯೊಳೆ ಮರವಟ್ಟು ಬಿದ್ದಿಹಿರೇಕೆ ?
ಕೀಳು ಕುನ್ನಿಗಳಾಗಿ ಕೊಳೆಯಲಿಹಿರೇನು ?
ಎಚ್ಚರಿನೊಳೆಚ್ಚರಿರಿ ! ಸ್ವಾತಂತ್ರ್ಯ ಶಕ್ತರವಿ—
ಯುದಿಸಿಬಹ ! ತರುಣ ಕಿರಣವೆ ಕಾಣದೇನು ?

ಜಾಜ್ವಲ್ಯಮಾನವನದೊ ! ನವಸೃಷ್ಟಿಯಾಗುತಿದೆ—
ದುರ್ನಿಯಮ ದುರ್ದಿನದ ಸುಳಿವಿಲ್ಲಿ ಸಲ್ಲ !
ನವ್ಯಶಕ್ತಿಯು ರಕ್ತಕಣದಿ ಖಣಖಣಿಸುತಿದೆ !
ಸತ್ಯ ಸ್ವಾತಂತ್ರ್ಯ ಸೂರ್ಯನ ಬೆಳಕಿದೆಲ್ಲ !

ಸ್ವರ್ಗ ಸೋಪಾನದಲಿ ಸ್ವಾತಂತ್ರ್ಯ ವೀರರನು
ಸ್ವಾಗತೀಕರಿಸುತಿಹರದೊ ! ಮುಂದು ಮುಂದು !
ಪಾರತಂತ್ರ್ಯದ ಪಾಶ ಕಡಿದೊಗೆದ ವೀರರಿಗೆ—
ಸ್ವರ್ಗ—ಸಿರ್ಗಗಳಿಹವು ಕಾಲಡಿಗೆ ಬಂದು !

ಬಿಡೆಬಿಡೆವು ಎಂದೆಂದೂ ನಮ್ಮದೀ ಸೊತ್ತೆಂದು
ಕಾದಾಡಿ ತಾಯ್ನಾಡ ಕೀರ್ತಿಯುಳಿಸುವೆವು ;
ಸತ್ಯ ಸಾಧನೆಗಾಗಿ ಮಣ್ಗೂಡಲು ಬಿಡಲಾಗಿ
ನಿತ್ಯ ಶುಭ್ರಯಶಶ್ಶರೀರ ಬೆಳಗುವೆವು.

ಘೋರ ಗರ್ಜನೆಯಿರಲಿ ! ದಾನವಾರ್ಭಟವಿರಲಿ,
ಮಾರಿಮೃತ್ಯುವೆ ಮುಂದು ಗುಡುಗುಡುಸಿ ನಿಂದಿರಲಿ ;
ಮಂಗಲೋತ್ಸವದಂದು ಸಂಗೀತ ಸ್ವರವೆಂದೂ
ಅದನಾಲಿಸುತ ನುಗ್ಗಿನುಗ್ಗಿವೆವು ಮುಂದು ;

CC-0. Jangamwadi Math Collection. Digitized by eGangotri

ಮುಂದು ಮುನ್ನುಗ್ಗುತಲಿ ಹಮ್ಮೆಯಿಂ ಹಿಗ್ಗುತಲಿ
ಸರ್ವ ಸತ್ವದಿ ರಣದ ಭೇರಿ ಹೊಡೆಯುವೆವು ;
ಕೆಚ್ಚೆದೆಯ ಕಟ್ಟಾಳುತನದಿ ಬೆಳಗಲಿ ಬಾಳು
ಸ್ವಾತಂತ್ರ್ಯ ಸ್ವಾವಲಂಬನವ ಪಡೆಯುವೆವು.

ಶಾಂತಿಯೈ ಸಮರದಲಿ ಕ್ರಾಂತಿ ಕಿಡಿ ಮಿಂಚಿರಲಿ
ಬಿಸಿರಕುತ ರೋಮರಂಧ್ರದಲಿ ಚಿಮ್ಮಿರಲಿ ;
ಭವ್ಯ ಭಾರತ ಮಾತೆ ಎಚ್ಚತ್ತ ಮಕ್ಕಳಲಿ
ವರದ ಹಸ್ತವನಿರಿಸಿ ಹರಸಿ ನಿಂದಿರಲಿ.

ನಿಮಿಷ ನಿಮಿಷಕೆ ನಮ್ಮ ದಾಸ್ಯತೆಯು ನೀಗಿರಲಿ
ಪರತಂತ್ರ ಬಂಧನವು ಬಿಗಿವಡೆಯದಿರಲಿ ;
ನಮ್ಮ ರಾಷ್ಟ್ರಪತಾಗೆ ಮುಗಿಲಟ್ಟ ಮುಟ್ಟಿರಲಿ
ಸತ್ಯಸ್ವರ್ಗೀಯ ಸಂದೇಶ ಸಾರುತಲಿ.

ಕಣ್ಣೀರ ಕಳೆಯಮ್ಮ ! ನಿನ್ನಡಿಯ ಸೇವೆಯಲಿ
ಎನಿತೊಂದು ಕಷ್ಟ ಹೋರಾಟಗಳೆ ಬರಲಿ ;
ಆದಕಾಗಿ ನಮ್ಮೊಡಲನೀಡಾಡಿ ಕೀರ್ತಿಯಲಿ–
ನಿನ್ನ ನೆಲೆ ನಿಲಿಸುವೆವು ಭಾಷೆ ತಿಳಿದಿರಲಿ !

ನಿನ್ನ ಸೇವೆಯೊಳಿದುವೆ ತನುವು ತೃಣವಾಗಿರಲಿ
ಯಜ್ಞಕುಂಡದೊಳಿಂದೆ ಆಹುತಿಗೆ ಸಲಲಿ ;
ಧಗಧಗಿಸಲೀ ದೇಹ ! ಸತ್ಯ ಸಂತೋಷದಲಿ
ಅರ್ಪಿಸುವೆವಿದೊ ಪುಣ್ಯ ಪಾದಪದ್ಮದಲಿ !

CC-0. Jangamwadi Math Collection. Digitized by eGangotri

ವಿಶ್ವಗರ್ಭದ ಗೋಳು

ಜಡಿಯೆ ಜಂಝಾವಾತ, ಹೊಡೆಯೆ ಮೇಘವ್ರಾತ,
ಸುಡೆ ಜಗವ ಸಿಡಿದೆದ್ದ ಸಿಡಿಲ ಝುರಿಯೊ ?
ಬಾಂದಳವೆ ಗುಡುಗುತಿದೆ, ಭೂತಳವೆ ನಡುಗುತಿದೆ,
ರಣಕಾಳಿಯಾರ್ಭಟೆಯ ಧ್ವನಿಲಹರಿಯೊ ?

ಹರಡಿಹುದು ಕಾಡ್ಗಿಚ್ಚು ಕಠಿಣೋನ್ನತಗಳಿದಿರೆ ?
ಮರ ಬಳ್ಳಿ ಬಂಡೆಗಳು ಸುಡು ಸುಡುತಿವೆ !
ಧಗಧಗಿಪ ಜ್ವಾಲೆಯಲಿ ವಿಷವಹ್ನಿಮಾಲೆಯಲಿ
ವನನಿಬಿಡಜೀವಿಗಳು ನರನರಳಿವೆ !

ಪಡುಗಡಲು ಭೋರ್ಗರೆದು ಪ್ರಳಯಪಂಥಕೆ ಕರೆದು
ಮುಸಗಿ ತೆರೆನೊರೆಗಳಲಿ ಧುಮುಕುತಿಹುದು !
ಶತ ಶತಘ್ನಿಗಳಿಂದ ಸಿಡಿವ ಗುಂಡುಗಳಿಂದ
ಜಗಜೀವ ತಲ್ಲಣಿಸಿ ಮರುಗುತಿಹುದು !

* * * *

ಹಿಂದಿನಿತಿಹಾಸದಲಿ ಪೂರ್ವದ ಪುರಾಣದಲಿ
ದೇವದಾನವರ ಕಾದಾಟ ಕತೆಯುಂಟು ;
ತರತರದ ರೂಪದಲಿ ವಿಧವಿಧದ ಮಾಯೆಯಲಿ
ಹಗಲಿರುಳು ಹೋರಾಟ ನಡೆದುದುಂಟು.

ಸತ್ಯಧರ್ಮಗಳನ್ನು ಮಿಕ್ಕು ನಡೆದವರನ್ನು
ಯುಗಪುರುಷ ತಾ ಬಂದು ಗೋಣ್ಮುರಿದನಂದು !
ಸತ್ಯ ಧರ್ಮಗಳೆಲ್ಲಿ ? ಯುಗಪುರುಷನಿರವೆಲ್ಲಿ ?
ಯಾರು ಮೇಣ್ ಮುಕ್ಕುವರೊ ತಿಳಿಯದಿಹುದಿಂದು.

೧೭

CC-0. Jangamwadi Math Collection. Digitized by eGangotri

ಸರ್ವತ್ರ ಸಂದೇಹ ಸರ್ವರಲಿ ಸಂಶಯವು
ಯಾರು ಧರ್ಮಧ್ವಜವನೆತ್ತಿಹಿಡಿದವರು ?
ಯಾರಿದನು ತಿಳಿಸುವರು ? ಯಾರು ತಿಳಿದವರಿಹರು ?
ಯಾರ ನಂಬುವುದಿಂದು ? ಯಾರ ನುಡಿ ನಿಜವು ?

* * * *

ಆಕ್ರಮಣ ಪರಪೀಡೆ ಸುಲಿಗೆ ಸೂರೆಯೆ ನೋಡೆ
ಇದೆ ನೀತಿಯೆಲ್ಲರದು ಹಿಂಸೆಯೇ ಶೌರ್ಯ !
ಈ ನೀತಿ ಸರಿಯೇನು ? ತತ್ವ ಧ್ಯೇಯಗಳೇನು ?
ಉತ್ತರಗಳಿದಕುಂಟೆ ? ತಮ್ಮದೇ ಕಾರ್ಯ !

ತಮ್ಮದೇ ತಮಗಿರಲಿ, ತಮ್ಮ ಮನೆ ಬೆಳಗಿಸಲಿ,
ತಮ್ಮವರು ಬಾಳಿರಲಿ, ಪರಪೀಡೆಯೇಕೆ ?
ಪರರಾದರೇನಾಯ್ತು ? ಪರರಾಜ್ಯವಲ್ಲವೇ ?
ಪರದೇಶ ಪರರದ್ದೈ ! ತಮಗಾಸೆಯೇಕೆ ?

ಹಾ ಬುದ್ಧಿ ಬರಲಿಲ್ಲ ! ಪಶುಕಾರ್ಯ ನಿಲಲಿಲ್ಲ !
ನೀತಿ ನಿಯಮಗಳಳಿದು ಹುಚ್ಚೆದ್ದಿತು !
ಬಲವು ನ್ಯಾಯವೆ ಜಗದಿ ? ಬಲಕೆದುರು ಪ್ರಬಲವಿದೆ ;
ಹೋರಾಟ ಹೆಚ್ಚಾಯ್ತು ಕಿಚ್ಚೆದ್ದಿತು !

* * * *

ಸತ್ಯಕ್ಕೆ ಗೆಲವೆಂದು, ಧರ್ಮಕ್ಕೆ ನೆಲೆಯೆಂದು,
ಬಾಂದಳಕೆ ಬಾಯೊಡ್ಡಿ ಕೂಗಲೇನು ?
ಸೆಳೆದಾಟ ಸೆಣಸಾಟ ಹೋರಾಟ ಚೀರಾಟ
ಜಗವೆ ಕಿವುಡಾಗಿಹುದು ಕೇಳ್ವುದೇನು ?

ಅರಮನೆಯು ಸಿರಿಮನೆಯು ನವರತ್ನ ಭಂಡಾರ
ಎಲ್ಲ ಧಾಳಾಧೂಳಿ ಕೇಳುವಾದ :
'ಸರ್ವರಿಗು ಸಮಪಾಲು ವಿಶ್ವಗರ್ಭದ ಗೋಳು !
ಶತಕೋಟಿ ಕಂಠಗಳ ನವನಿನಾದ !

CC-0. Jangamwadi Math Collection. Digitized by eGangotri

ಆಳೊಡೆಯರೆಂದಿಲ್ಲ, ದುಡ್ಡಿನಾಳ್ವಿಕೆ ಸಲ್ಲ,
ರಾಜಮಕುಟಗಳಿಲ್ಲ-ಸಮತೆಯೆಲ್ಲ ;
ಸರ್ವಾಧಿಕಾರಿಗಳ ದರ್ಪ ನಡೆಯುವುದಿಲ್ಲ,
ನವತತ್ವ ನಾಟಿಹುದು ಜನತೆಗೆಲ್ಲ !

ಸಂದೇಹ ಸಂಕುಲವು ವಿಷಮತೆಯು ಗೊಂದಲವು
ರಣಪ್ರಮತ್ತರ ಬೊಬ್ಬೆಯಡಗಲಿಹುದು !
ಹೊಸಜಗದ ನಿರ್ಮಾಣವಾಗಲಿದೆ : ಮೊಳಗುತಿದೆ-
ಕಹಳೆಯದೊ ! ಸಮತೆಯನೆ ಸಾರುತಿಹುದು.

CC-0. Jangamwadi Math Collection. Digitized by eGangotri

ಉಪವಾಸ

ಉಪವಾಸ
ಉಪವಾಸ
        ವಿಶ್ವತೋಮುಖವಾಗಿ
ದಹಿಸುತಿದೆ
ಸಹಿಸದಿದೆ ;
        ತಪ್ತ ಜೀವನದಲ್ಲಿ
        ತುತ್ತನ್ನ ಸಿಗದಿಲ್ಲಿ
        ನಿತ್ಯ ನರಳುವೆವೆಂದು ;
        ಮೃತ್ಯುಗೌತಣ ಮುಂದು.

೨

ಕರಗಿದೆವು
ಮರುಗಿದೆವು
        ಅನ್ನದೇವರ ಕೂಗಿ
ಕೊರಗಿದೆವು
ಸೊರಗಿದೆವು ;
        ಬಳಿಯು ಸೇರದ ಸಾವು
        ತಿಳಿಯಬಾರದೆ ನೋವು ?
        ಕಳೆಯಲಾರದ ಜೀವ
        ತಳೆಯಲಾರದು ನೋವ !

೩

ಹೊಟ್ಟೆಯಲಿ
ಬಟ್ಟೆಯಲಿ
        ಸರ್ವಸಾಮಸ್ತ್ಯದಲಿ

CC-0. Jangamwadi Math Collection. Digitized by eGangotri

ಶೂನ್ಯತೆಗೆ
ಮಾನ್ಯತೆಯು ;
ಕತ್ತನೆತ್ತುತ ಜಗವ
ಸುತ್ತು ನೋಡಿದ ಸಮಯ-
ವಿತ್ತು ; ಇಂದಪಮಾನ
ಮುತ್ತಿ ಬತ್ತಿಹುದು ಮನ.

೪

ತೊಳಲಿದೆವು
ಬಳಲಿದೆವು
ಉಪವಾಸ ಸಾಗರದಿ
ಮುಳುಗಿದೆವು
ಮುಳುಗಿದೆವು ;
ಮರಣವೊಂದೇ ನಮಗೆ
ಶರಣುಯೆಂದೀ ಧರೆಗೆ
ಶಿರಬಾಗಿ ಕಾದಿಹೆವು,
ಬರಬಾರದೇ ಸಾವು ?

೫

ಶಾಂತಿಯುನೊ
ಕ್ರಾಂತಿಯುನೊ
ಉಪವಾಸ ರಾಜ್ಯದಲಿ
ಸಾರದಿರಿ
ದೂರವಿರಿ ;
ಮಿದು ಕರುಳು ಹೃದಯಗಳು
ಕುದಿಯುತಿವೆ ಬೆಂಕಿಯುಲಿ !
ಎದೆಯಿಲ್ಲವೇ ನಿಮಗೆ ?
ಬದುಕುಪುತ್ತರ ಹೇಳಿ.

CC-0. Jangamwadi Math Collection. Digitized by eGangotri

ಚಿನ್ನ ಕನಸು ಕಂಡೆನೊಂದು

ದೂರಪೂರ್ವಕಿಂದು ರಣದ ಜ್ವಾಲೆ ಜ್ವಲಿಸಿ ಮುಟ್ಟಿತು ;
ಪಾಶ್ಚಿಮಾತ್ಯರುಗ್ರಪಾಪ ಹಂತ ನಮಗು ತಟ್ಟಿತು !
ಅಯ್ಯೊ ಹನನ ! ರುದ್ರ ಮರಣ ! ಮುತ್ತಿತು ರಣ ಮಾರಣ !
ಭರತ ಜನನಿ ಪುಣ್ಯಧರಣಿ ಬೀಳ್ವುದೆ ಬಲಿ ಕಾರಣ ?

ರಕ್ತಸಿಕ್ತ ಮೃತ್ಯುಭಕ್ತ ನರಪಿಶಾಚವೇಳವೊ ?
ರಾಗರೋಷದುಗ್ರವೇಷ ! ವಿಕಟವಕಟ ತಾಳವೊ ?
ಬಾನು ಕಡಲು ಭೂಮಿಯೊಡಲು ಸಿಡಿಸಿಡಿವುದು ಘಾತಕೆ !
ಸತ್ಯಜೀವ ದಯಾಭಾವ ಸುಡುಸುಡುವುದು ಯಾತಕೆ ?

ನಗರನಗರ ಗ್ರಾಮಗ್ರಾಮ ಗೃಹಕುಟೀರ ಹೊರಳ್ದವು !
ವೃದ್ಧ ತರುಣ ಬಾಲ ಮರಣ ! ಹೆಣ್ಣು ಗಂಡು ನರಳ್ದವು !!
ಏನು ಪಂಥ ? ಕೊಲ್ಲುವಂಥ ಕಾರ್ಯವೊಂದು ಧೈರ್ಯವೆ ?
ವಧಿಸುವವರು ಬದುಕಿಸುವಿರೆ ! ಈ ಪ್ರಮಾದ ಶೌರ್ಯವೆ ?

೨

ವಾಯುಲೋಕವಾಳಿಯಾಯ್ತು, ಕಡಲಗರ್ಭ ಸೀಳಿಯಾಯ್ತು,
ಯಂತ್ರದಲಿ ನಿಸರ್ಗ ಗೆಲಿದನಂತಸುಖವ ಸುಲಿದುದಾಯ್ತು !
ಮನುಜಗೈದ ಮಾಟವಿಂದು ನರಕುಲವನೆ ನುಂಗುತಿಹುದು !
ವಾಯು ಪೃಥ್ವಿ ಕಡಲು ಸುತ್ತಿ ಮೂರು ಮುನಿದು ಮುಕ್ಕುತಿಹುದು !!

ಆಳಬೇಕು ಬಾಳಬೇಕು ಬೆಳಗಬೇಕು ಕೆಲವರೊ ?
ಬೀಳು ಗೋಳು ದಾಸ್ಯ ಹಾಸ್ಯ ಸುಲಿಗೆ ಬಲಿಗೆ ಹಲವರೊ ?
ಅಸಮ ವಿಷಮ ತಾರತಮ್ಯ ಭೇದಬುದ್ಧಿ ಮುಸಗಲಿಂತು !
ವಿಶ್ವಜನನಿ ಕಂಬನಿಯಲಿ ಜ್ವಲಜ್ಜ್ವಾಲೆ ಹರಿದುಬಂತು !

CC-0. Jangamwadi Math Collection. Digitized by eGangotri

ಬಾಂಬುಮಳೆಯು ಸುರಿಯುವಾಗ, ಗುಂಡುಹೊಳೆಯು ಹರಿಯುವಾಗ,
ರುಂಡಮುಂಡ ಹೊರಳುವಾಗ, ಮೃತ್ಯುಮುಖದಿ ನರಳುವಾಗ,
ಬಣ್ಣಭೇದವುಂಟೆ ಹೇಳಿ ? ಧನಿದರಿದ್ರರೆಲ್ಲ ಕೇಳಿ !
ಎಂಥ ರುದ್ರನೃತ್ಯಕೇಳಿ ! ಕೆರಳಿರುವಳು ಕ್ರಾಂತಿಕಾಳಿ !

೩

ಯುಗದ ಕೊನೆಗೆ ಪ್ರಳಯವಂತೆ, ಹೊಸತು ಸೃಷ್ಟಿಯಪ್ಪುದಂತೆ,
ಸಾರಿದವು ಪುರಾಣ ಮುಂತೆ ; ಭಾವಿಸಿದ್ದೆ ಕಥೆಯ ಕಂತೆ ;
ಪ್ರಳಯ ಸಮ ಸಮಾನ ದೃಶ್ಯವಿದನು ಕಂಡು ಬೆರಗನಾಂತೆ !
ಶಾಂತಿ ಸುಖದ ನವ್ಯ ಸೃಷ್ಟಿ ನೋಡಲುಂಟೆ ? ನಿತ್ಯ ಚಿಂತೆ.

ರತ್ನಮಕುಟ ಹಾರಿ ಹೋಯ್ತು, ಸಿಂಹಪೀಠ ಧ್ವಂಸವಾಯ್ತು
ಅರಮನೆಗಳು ಕರಗುತಿರಲು ದರ್ಪ ಶಿಖರ ಕುಸಿದುಬಿತ್ತು !
ಹೊಸತು ಜಗದ ಸೃಷ್ಟಿಯಿಲ್ಲಿ ! ದೀನ ಜನರ ತುಷ್ಟಿಯಲ್ಲಿ
ನಿತ್ಯ ಸತ್ಯ ಶಾಂತಿ ನೀತಿ ಸಮತೆ ಮಮತೆ ತುಳುಕುವಲ್ಲಿ !

ವಿಷಮ ವಿಷಸಮಾಜವಳಿಯೆ ದಿವ್ಯಲೋಕದುದಯವೆಂದು–
ಚಿನ್ನ ಕನಸು ಕಂಡೆನೊಂದು ! ಮೂಡು ದಿಶೆಯ ನೋಡಿ ನಿಂದು ;
ಪಶ್ಚಿಮವನು ಕಾಳರಾತ್ರಿ ಮುಚ್ಚಿ ಧಾತ್ರಿ ಘೋರವಾಯ್ತು !
ಪೂರ್ವರಾಷ್ಟ್ರರಮಣಿಮುಖದಿ ಸೂರ್ಯಕಿರಣಕಾಂತಿಯಿತ್ತು.

CC-0. Jangamwadi Math Collection. Digitized by eGangotri

ಗಾಂಧೀ ದರ್ಶನ

ಶಾಂತ ಸಾಮ್ರಾಜ್ಯದ ಮ–
ಹಾಂತ ಸಮ್ರಾಟನನು
ಕಂಡೆನಣ್ಣಾ
ಹರ್ಷ–
ಗೊಂಡಿಹನ್ನ.

ನಿಷ್ಕಾಮಕರ್ಮದಲಿ
ಕಾರ್ಯರಂಗಕ್ಕಿಳಿದು
ನಗುತಲಿಹನು
ಜಗದಿ–
ಮಿಗುತಲಿಹನು.

ಸತ್ಯಾಗ್ರಹೋಪಲದಿ
ಸರಳ ಜೀವನದಿಂದ
ಸವೆದ ಮೂರ್ತಿ
ಲೋಕ–
ಭರಿತ ಕೀರ್ತಿ.

ತೇದ ಶ್ರೀಚಂದನದ
ತಿರುಳಿಂದ ತಿರುತಿರುಗಿ
ಬರದೆ ಕಂಪು ?
ಕಾಯ–
ಕಿದುವೆ ಪೆಂಪು.

CC-0. Jangamwadi Math Collection. Digitized by eGangotri

ವಿಶ್ವ ಬಾಂಧವ್ಯತೆಯ
ನಿತ್ಯ ಸಂಬಂಧವನು
ಬೆಳೆಸುವಂದು
ವಂದ್ಯ–
ನಾದ ಬಂಧು.

ಜ್ಞಾನಸಂಪೂರ್ಣತೆಯ
ಧ್ಯಾನ ಸಂಸಿದ್ಧಿಯಿಂ
ಮೆರೆವ ಯೋಗಿ
ನಿತ್ಯ–
ಪೂರ್ಣತ್ಯಾಗಿ.

ಆತ್ಮಶಕ್ತಿಯ ಬಲದಿ
ಪೂರ್ಣಮುಕ್ತಿಯನೆಳೆದು
ಶಾಂತನಾದ
ಕರ್ಮ–
ಧರ್ಮಯೋಧ.

ರಾಷ್ಟ್ರಸಂಸ್ಥಾಪನೆಯ
ಸ್ವಾತಂತ್ರ್ಯ ರಣಭೇರಿ
ಹೊಡೆದನಿವನು
ಸತ್ಯ–
ಶಕ್ತನಿಹನು.

ಸರ್ವಸುಂದರವಾದ
ಜ್ಞಾನಬಂಧುರವಾದ
ಗತಿಯನೊಂದು
ಪಡೆದ–
ಸ್ಥಿತಿಯಿದಿಂದು.

CC-0. Jangamwadi Math Collection. Digitized by eGangotri

ಪತಿತ ಪಾವನ ಶಕ್ತಿ
ಶುದ್ಧ ಸಾತ್ವಿಕ ಭಕ್ತಿ
ಇರುವುದಿಲ್ಲಿ
ಪೂಜ್ಯ-
ಚರಣದಲ್ಲಿ.

ಈ ಪೂಜ್ಯ ಚರಣಗಳ
ಪುಣ್ಯಸ್ಪರ್ಶನದಿಂದ
ಬಂಡೆಯೊಡೆದು
ಹಾಲು-
ಸುರಿದು ಬಹುದು !

ತಮದಿಂದ ಜ್ಯೋತಿಗೆ
ಮೃತ್ಯುವಿಂದಮೃತಕ್ಕೆ
ವಿಶ್ವವನ್ನೆ
ಗಾಂಧೀ-
ಸಾಗಿಸುವನೆ ?

CC-0. Jangamwadi Math Collection. Digitized by eGangotri

ಗಾಂಧೀಜಿಗೆ

ಎನಿತು ಶತಮಾನಗಳ ನಿಶ್ಚಲತಪೋನಿಷ್ಠೆ
ಫಲಿಸಿತೋ, ಭಾರತಿಯ ಸೌಭಾಗ್ಯ ಬೆಳಗಿತೋ,
ಸತ್ಯ ನಿರ್ಮಲ ಶಾಂತ ಮೂರ್ತಿ ಗಾಂಧೀಜಿ ! ನಿಮ್ಮ
ಪುಣ್ಯ ಜನ್ಮೋದಯದ ಮಂಗಳೋತ್ಸವದಂದು !
ಅಸ್ತೇಯ-ಶುದ್ಧಿ-ದಯೆ ಸ್ಥಿರ ಸತ್ಯವ್ರತಗಳಲಿ
ಸಿದ್ಧಿಗೊಂಡಿಹ ನಿಮ್ಮ ಜೀವ ಪಾವನವಾಯ್ತು ;
ಹೆತ್ತೊಡಲಿಗಮೃತಸಿಂಚನವಾಯ್ತು ! ನಿಮ್ಮಿಂದ
ರಾಷ್ಟ್ರ ಸರ್ವಾಂಗದಭ್ಯುದಯ ಸಾಧನೆಯಾಯ್ತು.

ದರ್ಪಮದ ಮೋಹಿತರು ಸ್ವಾರ್ಥಸುಖಸಾಧಕರು
ಮತಿಗೆಟ್ಟ ಮಾನವರು ಜಗವ ಪೀಡಿಸುತಿರಲು,
ಪಶ್ಚಿಮದ ಭೂದೇವಿ ಕೆರಳಿದಳೆ ? ಪ್ರಳಯ ಪಂ-
ಥವತೊಟ್ಟು ಲೋಕನಾಶಕೆ ಮನವ ಮಾಡಿದಳೆ ?
ಜೀವಿಗಳು ಕೂಗುತಿವೆ ! ಕಾಪಾಡಿ ಕಾಪಾಡಿ-
ರೆಂದನ್ಯಗತಿಯಿಲ್ಲದಿಂದು ನಿಮ್ಮನೆ ನೋಡಿ.

CC-0. Jangamwadi Math Collection. Digitized by eGangotri

ಅವನೇ

ಆವನಂ ತಿಳಿಯಲೆಂ
ದೀ ಜಗದ ಜೀವಿಗಳು
ಸಾವು ನೋವುಗಳಿಲ್ಲ-
ದಲೆಯುತಿಹವೊ !

ನಿಮಿಷದಿಂ ದಿನವಾಗೆ
ದಿನದೊಳಬ್ದವು ಸಾಗೆ,
ಶತಮಾನ ಸತವಾಗ-
ಲರಿಯದಿಹನು.

ವೇದಗಳ ಬೋಧೆಯಲಿ,
ಸಾರುವ ಪುರಾಣದಲಿ
ಶಾಸ್ತ್ರಗಳ ಸೂತ್ರದಲಿ
ಸೇರದಿಹನು.

ತಾತ್ವಿಕರ ತತ್ವದಲಿ,
ಮೌನಿಗಳ ಮೌನದಲಿ,
ತಾರ್ಕಿಕರ ತರ್ಕದಲಿ,
ಸಿಲುಕದಿಹನು.

೨

ಅಳೆಯಲಾರದ ಆಳ-
ದಳೆತೆಯೊಂದಿರುವಲ್ಲಿ
ನೆಲೆಸಿರುವನೆಂದೆಲ್ಲ
ವಾದಿಸುವರು !

CC-0. Jangamwadi Math Collection. Digitized by eGangotri

ಆಕಾಶದವಕಾಶ–
ದರಮನೆಯನರಿತಲ್ಲಿ !
ಬೇಕಾದ ಸಂಪದವ
ಸಾಧಿಸುವರು !

ಬಾಹ್ಯತೆಯಸಹ್ಯದಲಿ
ಆಂತರ್ಯದಾಳವನು
ಗಾಹಿಸುವಗಾಧದಲಿ
ಶೋಧಿಸುವರು !

ಗಗನದಗಲದೊಳರಿತು
ಹಸನಾದ ಕುಸುಮವನು
ಸೊಗಸಾದ ಸೌಸವಕೆ
ಮೋದಿಸುವರು !

೩

ಕಾಣಲಾರದ ತಾಣ–
ದೊಳಗಿರುವ ಕಲ್ಪನೆಯ
ಜ್ಞಾನ-ವಿಜ್ಞಾನವಿದು
ವ್ಯರ್ಥವಲ್ಲ ?

ಪೋಗದೂರಿಗೆ ಬರೆಯು–
ದೊಂದು ಪತ್ರವನಿತ್ತು
ಸಾಗಿಸುವ ಸಾಹಸದೊ–
ಳರ್ಥವಿಲ್ಲ.

ಸಂಸಾರದೀ ಸಾರ
ಸರ್ವ ಸಂಗ್ರಹದಲ್ಲಿ
ಸೇರದಿರುವನ ಕಂಡು
ಸ್ವಾರ್ಥವಿಲ್ಲ.

CC-0. Jangamwadi Math Collection. Digitized by eGangotri

೪

ಬೆಳಕನ್ನು ಪೊತ್ತೆತ್ತಿ
ತಿಳಿವಿಕೆಯ ನಚ್ಚೊತ್ತಿ
ಬೆಳಗುವರುಣನೊಳಿರ್ಪ
ಅರುಣತೆಯದಾರ್ ?

ಮೂಡಣೆಂದೆದ್ದು, ಪಡು-
ವಣ ಕಡಲಿನೊಳಬಿದ್ದ
ಕತ್ತಲೆಯ ಕಿತ್ತಾರ್ಯ-
ನಾರ್ಯತೆಯದಾರ್ ?

ಗಾಢಾಂಧಕಾರದಲಿ
ಭೀಕರದ ಮೌನದಲಿ
ಗೂಢತೆಯ ಜೋಡಿಸಿಹ
ನಿರ್ಲಿಪ್ತನಾರ್ ?

ಬಾಲಕರ ಬಾಲ್ಯದಲಿ
ಚೆನ್ನಿಗರ ಚೆಲುವಿನಲಿ
ಲೋಲತೆಯ ಪಾಲಿಸಿಹ
ಲೀಲಾತ್ಮನಾರ್ ?

ಕವಿಯ ಮಾತಿಗೆ ಬಂದು
ಭವ್ಯ ಭಾವವ ತಂದು
ನವ್ಯ ಕಾವ್ಯವ ರಚಿಸೆ
ಸಾಹಾಯ್ಯನಾರ್ ?

ಶುದ್ಧ ಹೃದಯನು ಪಡೆವ
ನಿತ್ಯ ಮುಕ್ತಿಯೊಳಿರುವ
ಸತ್ಯ-ಶಾಂತಿಯ ಪ್ರೇಮ-
ದೊರತೆಯವನೇ !

CC-0. Jangamwadi Math Collection. Digitized by eGangotri

ಅರುಣನರುಣತೆಯಲ್ಲಿ
ಸೂರ್ಯನಾರ್ಯತೆಯಲ್ಲಿ
ಸತ್ಯ-ಸೌಂದರ್ಯದಲಿ
ವ್ಯಾಪ್ತನವನೇ !

ಚೆಲುವ ಚೆನ್ನಿಗರಾಯ
ಕವಿಯ ಕಾವ್ಯದ ಜೀವ
ಒಲುಮೆಗಲೆಯುತ ಕಾವ
ದೇವನವನೇ !

CC-0. Jangamwadi Math Collection. Digitized by eGangotri

ನೀನು ನನ್ನ ಭಾವನೆಯಲಿ

ಪ್ರೇಮಜಲತರಂಗದಲ್ಲಿ
ಅದರೊಳವಿತ ಭಾವನೆಯಲಿ
ಭಾವಿಸಿರ್ಪ ಎದೆಯ ತಳದಿ
ರಾಜ್ಯಕಟ್ಟಿ ನೆಲೆಸಿಹೆ !
ಅಲ್ಲಿ ನಿನ್ನ ಅಮರಗಾನ !
ಇಂದು ಕಾಂಬೆನದರ ತಾಣ.

ಎಂತೊ ಏನೊ ಏತಕೆಂದು
ತಿಳಿಯದೇ ಮುಂದರಿಯಲೆಂದು
ದಾರಿ ಕಂಡು ಕಾಣದಾಗಿ
ಕುಗ್ಗಿ ಬಗ್ಗಿ ವ್ಯಥೆಯನಾಂತೆ ;
ಆಗ ಕಂಡಿತೊಂದು ಥಳಕು !
ನಿನ್ನ ರಾಜ್ಯದೆಡೆಯ ಬೆಳಕು !

ಮನದೊಳಾಸೆ ಮೂಡಲಾಗಿ
ಬೆಳಕು ಕಂಡ ಕಡೆಯ ಸಾಗಿ
ದಿಟ್ಟಿಯಿಟ್ಟು-ನೋಡುವಲ್ಲಿ
ಕಾಣದಾಯ್ತು-ಕತ್ತಲಲ್ಲಿ !
ಎದೆಯೊಳಾಸೆ ಮೂಡಿತು ;
ನೋಡಲೊಡನೆ ಬಾಡಿತು !

ಇಂತು ಬಹಳ ದಿನವ ಕಳೆಯೆ
ಜೀವಿತವ ನಿರಾಶೆ ತನ್ನ-
ಚಿಂತೆಗೋಲಿನಿಂದಲಳೆಯೆ,

CC-0. Jangamwadi Math Collection. Digitized by eGangotri

ಇಂದು ಕಂಡೆ ನಿಜವ ನಿನ್ನ
ಇನ್ನು ನಿನ್ನ ಮಾಟದಾಟ–
ವೆನ್ನ ಬಗೆಯು ಬೆರೆಸದಿರಲಿ !

ಎನ್ನೆದೆಯೊಳು ನಿನ್ನ ಕಂಡೆ-
ನೀಗ ನಿನ್ನೊಳಾನೆ ಬೆರೆತೆ ;
ನೀನು ನನ್ನ ಭಾವನೆಯಲಿ !
ನಾನು ಜಲತರಂಗದಲ್ಲಿ !
ಮನದ ರಾಜ್ಯದಲ್ಲಿ ಸುಖಿಪ
ಧನ್ಯ ನಾನು ನಿನ್ನ ವೇಣು !

3

CC-0. Jangamwadi Math Collection. Digitized by eGangotri

ಪೊಸಡಿ ಗುಂಪೆ

ಎಸೆವ ಶುಭ್ರ ಶಿಖರವೆತ್ತಿ
ಮಸಗಿ ನಿಂತ ಧೀರ ಮೂರ್ತಿ !
ಪೊಸಡಿಗುಂಪೆ ಬೆಟ್ಟ ನೋಡು !
ಹೊಸತು ಕಣ್ಗೆ ಹಬ್ಬ ಮಾಡು.
ಸ್ಫೂರ್ತಿ ಧಾರೆಯೆರೆದಿದೆ ;
ಶಕಿ ನೀಡಿ ನಿಂತಿದೆ.

ಕಾಡ ಕೇಡು ನಿನ್ನೊಳುಂಟೆ ?
ನೋಡೆ ದೃಷ್ಟಿ ಮರಳಲುಂಟೆ ?
ಬೇಡವೆಮಗೆ ಹಾವು ಹುಲಿಯು–
ಬೀಡು, ನೀನೆ ಬೆಟ್ಟದೊಡೆಯ !
ಅಸಮ ಕೀರ್ತಿತೇಜನೆ !
ಹೊಸ ನಗಾಧಿರಾಜನೆ !

ದೂರವಿರುವ ಬೆಟ್ಟವೆಲ್ಲ
ತೋರುತಿಹವು ನುಣ್ಣಗೆಂದು,
ಮೇರುಹಿಮಾಲಯಗಳನ್ನು
ಏರ ಹೋಗಿ ಮಂಡಿದರಿಂದು,
ಅದರೊಳಲ್ಲಿ ಕ್ರಾಂತಿಯು ;
ಒದವುದಿಲ್ಲಿ ಶಾಂತಿಯು.

ಗುಂಪೆ ! ನಿನ್ನ ಶಿಖರವೇರೆ
ತಂಪು ನಯನ ಮನದೊಳೂರೆ
ಪೆಂಪ ತೋರ್ಪ ಕಡಲ ನೋಟ
ಕಂಪ ತರುವ ಗಾಳಿಯೋಟ
ರಸಿಕಗಿದೆ ರಸಾಯನ !
ಹೊಸ ನಿಸರ್ಗಭೋಜನ !

CC-0. Jangamwadi Math Collection. Digitized by eGangotri

ಕೊಡಲಿ ಕಡಿತದಿಂದ ಪಡೆದ
ಪೊಡವಿಯಿಂದು ಸಾಲದೆಂದು
ನುಡಿಯುತಿರುವೆಯೇನು, ಪಡುವ-
ಕಡಲನೋಳ್ಪ ಬೆಡಗಿನಿಂದ ?
ಆಶೆ ಭಾಷೆ ಫಲಿಸಲಿ !
ದೇಶ ಕೋಶ ಬೆಳಗಲಿ !

ಮೂಡ ಪಡುವ ತೆಂಕ ಬಡಗ-
ನಾಡ ನೋಡುತಿರುವ ಬೆಡಗ,
ಹಾಡಲೆಂದೆ ಮನದ ಬಯಕೆ
ಮಾಡಲೇನು ಮಾತು ಸಾಕೆ ?
ಅಂತು ವಿಪುಲ ನೀನಿಹೆ ;
ಇಂತು ವಿಫಲ ನಾನಿಹೆ !

ಜಗವ ಮೆಟ್ಟಿ ಘನತೆಯಿಂದ
ಮುಗಿಲ ಮುಟ್ಟಿ ಸೊಗಸಿನಿಂದ
ದಿಗಿಲುಗೊಳಿಸಿ ಮಿಗಿಸಿ ನಿಂದ
ನಗವೆ ! ನಿನ್ನ ಬಗೆಯೆ ಚಂದ.
ಚೆಲುವ ರೂಪನಾಂತಿಹೆ ;
ಒಲಿದು ಮುಂದೆ ನಿಂತಿಹೆ.

ಎನ್ನ ತುಳುವ ನಾಡ ಜಸದ
ಉನ್ನತಿಯನು ತೋರುತೆಸೆದ
ನಿನ್ನ ಶುಭ್ರ ಶಿಖರಕಿಂದು
ಸನ್ನುತಿಯನು ಸಲಿಸಲೆಂದು
ಅವಸರದಲಿ ಹಾಡಿದೆ ;
ಕವನ ಕಟ್ಟಿ ನೋಡಿದೆ.

CC-0. Jangamwadi Math Collection. Digitized by eGangotri

ತುಳುನಾಡಿತಿ

ಹೊಳೆವುದು ಹೊಳೆ ಬೆಳೆ ತೋಟ
ನಾಡ ನಡತೆಗಿದೆ ನೋಟ !
ಕಣ್ ಬಗೆಗಳ ನಲಿದಾಟ
ನಿಜ ನಿಸರ್ಗದಲಿ ಮಾಟ !

ನಿತ್ಯ ಶಾಂತಿಯ ಶಿಬಿರ
ನೋಡ ! ನಾಡು ತುಳುಜನರ ;
ಸುಗ್ಗಿ ಸಂತಸವ ಚೆಲ್ಲಿ
ನೆಲವೆ ನಲಿಯುತಿಹುದಿಲ್ಲಿ !

ಚೈತನ್ಯದ ಚೆಲು ಚವರಿ
ಸಿರಿ ತುಳುನಾಡಿನ ಕುವರಿ ;
ಗೌರವ ಗುಣ ಗಂಭೀರೆ
ಸುರ ಸೌಂದರ್ಯವೆ ಸೂರೆ !

ಅರಳಿರುವಲರೆವೆ ನಿನ್ನ
ಪುಷ್ಪಿತ ಸೌರಭವನ್ನ-
ಸುತ್ತಲು ಸುರಿದಿದೆ ಚಿನ್ನ !
ಎತ್ತಲು ಗಮಗಮಿಪನ್ನ !

ದಂತ ಪಂಕ್ತಿ ಹಿರಿ ಹಿಗ್ಗ-
ದುಂಡುಮಲ್ಲಿಗೆಯ ಮೊಗ್ಗ,
ಪೂರ್ಣಚಂದ್ರಗಿದೆ ಬುಗ್ಗ,
ಹರೆಯವೆತ್ತ ತುಳು ಹುಡಿಗೆ !

CC-0. Jangamwadi Math Collection. Digitized by eGangotri

ಸಿರಿ ತುಳುನಾಡಿನ ಬಾಲೆ !
ಕಣ್ಣ ಕಾಂತಿಯನೆ ಪೋಲೆ,
ಜಿಂಕೆಮರಿಯು ತಾನತ್ತು–
ಬೇಡಿತೆ ನಿನ್ನೊಳು ಸೊತ್ತು ?

ಚೆಲುವ ಚೆಂದುಟಿಯು ಚೆಲ್ಲಿ–
ರಾಗ ರಂಜನವ ನಲ್ಲೆ !
ತೊಂಡೆಹಣ್ಣದೆನಲೊಲ್ಲೆ
ಪಲ್ಲವೋಲ್ಲಸಿತ ಬಲ್ಲೆ.

ಸರಸಿಜಮುಖಿಯೆಂದೇಕೆ
ಬಣ್ಣಿಪೆಯೇ ಕವಿ ? ಜೋಕೆ !
ಕನಸು ಮನಸಿಗದು ಬಯಕೆ
ಸುಂದರ ಸಂಗ್ರಹ ಸಾಕೆ ?

ಕೆಸರಿನ ಬಸುರಿಂದೆದ್ದು
ಕಂಟಕ ಕಾಯದೊಳಿದ್ದು
ಹೂವದಿರುಳು ಹುದುಗಿರದೆ ?
ನಿನಗೆ ನೀನೆ ಸರಿ ಮುಗುದೆ !

ಸತ್ಯ ಸುಂದರತೆ ಬೆರೆತ
ನಿತ್ಯ ನಿರ್ಮಲತೆಯರಿತ
ಪ್ರೇಮ ಪೂರ್ಣಿಮೆಗೆ ಬಲಿದ
ಮೈಯ್ಯ ಕಟ್ಟು ಬಿಗಿ ಬಿನದ.

ಶಾಂತಿ ನೀತಿ ನಯಲೋಕ–
ದಲ್ಲಿ ನೀನೆಯಧಿರಾಣಿ !
ಕಾಂತಿಕಲೆಯ ಕಟ್ಟೆರಕ
ಸೊಲ್ಲಿಸುತಿಹೆ ರಸರಾಣಿ !

CC-0. Jangamwadi Math Collection. Digitized by eGangotri

ಕುದುರೆಮುಖದ ತುದಿಯೇರಿ
ಇಳಿದು ಬಯಲ ಬಳಿ ಹಾರಿ
ನೇತ್ರಾವತಿಯಲಿ ಮಿಂದು
ಮಂಗಳೂರಿನಲಿ ನಿಂದು–

ಸಾಗರಸಂಭವಶ್ರುತಿಗೆ
ರಾಗವ ಜೋಡಿಸು ಜತೆಗೆ ;
ನೆಲ ನಲಿಯಲಿ ತನತಾನ !
ಗಾನ ನಿನಗೆ ವರದಾನ.

ಮಕ್ಕಳ ಮುದ್ದಿಸುವಂದು
ಜೋ-ಜೋ-ಜೋಗುಳವೆಂದು,
ಕನ್ನಡ ಕವಿಗಳಿಗಂದು
ನೀ ಕಲಿಸಿಹುದಹುದೆಂದು–

ಕವಿವರ ಮುದ್ದಣ ಪೇಳ್ದ
ತಾಯ್ನುಡಿ ತಿರುಳರಿತಿದ್ದ
ಮುದ್ದು ಮುದ್ದು ಜಗವಾಳ್ದ
ಮುದ್ದಣ ಸವಿ ಸವಿದೆದ್ದ !

ಪಚ್ಚೆ ಪೈರುಗಳ ನೋಡು
ಹೊಲ ನೆಲದಲಿ ನೀನಾಡು
ಕಟ್ಟಳೆಯನು ಕಾಪಾಡು
ತುಳುಪಾಡ್ದನ ಪದ ಹಾಡು !

ನಟ್ಟಿ ನೇಜಿಯೊಳೆ ನಿರತೆ
ರಾಗಲಹರಿಗೇಂ ಕೊರತೆ ?
ಮನೋಮಂದಿರದೊಳರಿತೆ
ಪುಣ್ಯಪಾಡ್ದನದ ಚರಿತೆ !

CC-0. Jangamwadi Math Collection. Digitized by eGangotri

ದಾನ ಧರ್ಮದಲಿ ನಿರತ
ಕಟ್ಟು ಕಟ್ಟಳೆಯೊಳಿರುತ–
ಕೀರ್ತಿವೆತ್ತ ತುಳುಜನರ,
ಹಾಡು ! ಪಾಡ್ದನದೊಳದರ !

ಶಿಲ್ಪ ಶಾಸ್ತ್ರಗಳ ರಚನೆ,
ಕಲಾ ಧರ್ಮಗಳ ಘಟನೆ,
ಸಾವಿರಕಂಬದ ಬಸದಿ–
ಶಾಸನ-ಶಾಶ್ವತ ಕೀರ್ತಿ !

ಕಾಲನು ಕುಣಿತದಿ ಕೆದರೆ
ಹಾ! ಹಾಳಾಯಿತೆ ಬಿದಿರೆ !
ಬಾರ್ಕೂರಿನ ರಸಕಥೆಯು,
ಗತ ವೈಭವದುರುವ್ಯಥೆಯು–

ಚೌಟ ಬಂಗರೊಡೆತನದಿ,
ಬಂಟರಾಳ್ದ ಮನೆತನದಿ,
ನಡೆದ ನಡಾವಳಿ ನೇಮ
ಹಾಡು ಪಾಡ್ದನದಿ ನಮ್ಮ !

ಕೋಟಿ ಕೊತ್ತಳಗಳೊಡೆದು,
ಮಂದಿ ಮಾರ್ಬಲವ ಕಡೆದು,
ಅರಿಶಿರ ಚೆಂಡಾಡಿದನು!
ವೀರನಾರು ಹೇಳದನು?

ಹಾಡು ಪಾಡ್ದನವ ಹಾಡು !
ಹ ಹಾ ! ವೀರ ಕೃತಿಹಾಡು !
ವೀರವನಿತೆಯನೆ ಹಾಡು !
ಎದೆಯುನರಳಿಸಲಿ ಹಾಡು !

ಸ್ವರ್ಣ ಭೂಮಿಯಲಿ ಹರಳು–
ಧನ್ಯ ಜನ್ಮಕಿದೆ ಹುರುಳು,

CC-0. Jangamwadi Math Collection. Digitized by eGangotri

ತೌಳವಾನ್ವಯದ ತಿರುಳು,
ನಿನ್ನ ಕಾಂತಿಮಯ ಕರುಳು !

ಸತ್ಯಸಂಗರದ ಭಟರು,
ಧೀರ ಶೂರ ತುಳುಜನರು,
ನಿನ್ನ ಕರುಳೊಳಿಡಿದಿಹರು,
ವೀರಘೋಷ ಮೊಳಗುವರು !

ತುಳುವ ಜವ್ವನಿಗನೊಲಿಯೆ,
ಹೆಮ್ಮೆ ಹುಮ್ಮಸದಿ ನಲಿಯೆ,
ಪ್ರೇಮಪುತ್ಥಳಿಯ ಪಡೆದು,
ಹಿಗ್ಗಿ ಹಿಗ್ಗಿ ಸುಖ ಸವಿದು–

ವರ್ಷ ನಿಮಿಷದಂತಿರಲು,
ಅಯ್ಯೊ! ಜೋಡಿ ಬೇರ್ಪಡಲು,
ನೊಂದು ಬೆಂದೊಡಲ ಬೆತೆಯು
ಹಾಡ ! ಪಾಡ್ದನದ ಕತೆಯು !

ಹಾಡು ! ಪಾಡ್ದನವ ಹಾಡು !
ಮೈಯ ಮರತೆಯದೊ ನೋಡು !
ಕಣ್ಣ ನೀರನದನೊರಸು !
ಕರುಣ ಕಥೆಯನಿದೊ ನಿಲಿಸು !

ನೀನೋರ್ವನೊಳೊಡನಾಡಿ
ಸವಿ ಸವಿಯುವೆ ಸಿಂಗಾಡಿ !
ಜನ್ಮ ಜತನದಲಿ ಜೋಡಿ–
ಮಾಡಿಕೊಂಡಿರೊಡಗೂಡಿ !
ಮುಗ್ಧಮನೋಹರ ಮಿಲನ !

ಸತ್ಯ ಸುಖದ ಸಂಕಲನ !
ಚಿತ್ತ ಚೇತನದ ಚಲನ !
ವಿಶ್ವವೈಭವದ ವಲನ !

CC-0. Jangamwadi Math Collection. Digitized by eGangotri

ಭ್ರಮರಗೀತೆ

ಇನಿತು ಸುಮಂಗ–
ಳರಳುತಿಹವು!
ಆರಿಗಾಗಿಯೊ?

ಪುಣ್ಯಫಲವು
ಪೂರ್ತಿಗೊಂಡ
ಧನ್ಯಗಾಗಿಯೊ?

೨

ಗಮ ಗಮಿಸುವ
ಅಲರನೆಲ್ಲ
ಮೂಸುವಾಸೆಯು!

ಒಲಿದು ನಲಿದು
ಸವಿಯ ಸೆಳೆದು
ನೋಡಲಿಷ್ಟವು!

೩

ಎತ್ತಿಯೊತ್ತಿ
ಮುತ್ತಿಡುತಿರೆ
ಎನ್ನದಾಗಲು;

ಸಾರಿ ಹಾರಿ
ಮಧುವ ಹೀರೆ
ಆಗದೇ ಚೆಲು!

CC-0. Jangamwadi Math Collection. Digitized by eGangotri

೪

ಆಗದೇನೊ?
ಸಾಗದೇನೊ?
ಮನಸುಕೇಳದು!

ಸರ್ವಸುಖವ
ಸ್ವಪ್ನವರಿವ
ಮರುಳುಮತಿಯಿದು!

೫

ಪರಿಮಳಿಸುತ
ನಗುತಲಿಹವು
ಎನ್ನ ಮುಂಗಡೆ;

ಆದರೇಕೊ–
ಸೊನ್ನೆ ಸಾಕೊ?
–ಎಂಬವೀ ಪಡೆ!

೬

ಮನಸಿಗಿಂತು
ಮರುಳು ಬಂತು
ಈಗಲೀಗಲೆ–

ಮುತ್ತಿ ಸುತ್ತಿ
ಮೂಸಿ ಮೂಸಿ
ಗಾಸಿಗೈಯ್ಯಲೇ?

CC-0. Jangamwadi Math Collection. Digitized by eGangotri

೭

ಆದರೇಕೊ
ಸದಯ ಹೃದಯ
ಆಗದೆಂಬುದು ;

ಅಲರಿವೆಲ್ಲ
ನಿನ್ನದಲ್ಲ
ಎಂದು ನುಡಿವುದು.

೮

"ಒಂದೆ ಸುಮವು
ನಿನ್ನದಿಹುದು
ಅದನೆ ಆಯ್ದುಕೊ !

ಬಂದ ಭಾಗ್ಯ
ಸವಿದು ನೋಡು
ತೃಪ್ತಿಗೆಯ್ದುಕೊ !

೯

ಮರುಳು ಮನಸು
ಕನಸಿನುಣಿಸು
ಗಟ್ಟಿ ಮಾಡಿಕೊ !

ಮಿಕ್ಕ ಸುಮವ
ಮುಟ್ಟಿ ನೀನು
ಕೆಟ್ಟಿ ನೋಡಿಕೊ!"

CC-0. Jangamwadi Math Collection. Digitized by eGangotri

೧೦

ಆಜ್ಞೆಯಿಂತು
ಆಗಲೆಂತು
ಮಿಕ್ಕಿ ನಡೆವೆನೊ?

ನಕ್ಕು ನುಡಿದ
ಸಮವನೆಂತು
ಸೊಕ್ಕ ಮುರಿವೆನೊ?

೧೧

ಪುಷ್ಪಕಿನಿತು–
ದರ್ಪವೇನು
ಮಾಟ ಮಾಡಲು?

ಏತಕಿಂತು
ಆಜ್ಞೆ ಬಂತು?
–ಮೋಸ ನೋಡಲು !

೧೨

ಎಂಥ ವೇಷ !
ಆಯ್ಯೊ ಮೋಸ,
ಎದೆಯು ಕುದಿವುದು !

ಮರುಳು ಮನಸು
ಮಂಕು ಹಿಡಿದು
ಮರುಗುತಿರುವುದು !

CC-0. Jangamwadi Math Collection. Digitized by eGangotri

೧೩

ಸುಮವನೊಂದ–
ನಾಯ್ವ ಕೆಲಸ
ಕಷ್ಟವಾಗಿದೆ !

ಎದೆಯಿದಿಂತು
ಸುಖಕೆ ಸೋತು
ಭ್ರಷ್ಟವಾಗಿದೆ !

*　　*　　*

ಇನಿತು ಸುಮಗ–
ಳರಳುತಿಹವು
ಆರಿಗಾಗಿಯೊ?

ಪುಣ್ಯ ಫಲವು
ಪೂರ್ತಿಗೊಂಡ
ಧನ್ಯಗಾಗಿಯೊ?

———

CC-0. Jangamwadi Math Collection. Digitized by eGangotri

ವಿರಹಿಣಿ

ವಿಶ್ವದೊಂದು ನಿಯಮವೆಂದು
ಹೃದಯವರಳಿತು ;

ಪುಣ್ಯಪ್ರಕೃತಿಪಾತವೆಂದು
ನಲ್ಮೆ ನಲಿಯಿತು;

ಎದೆಯ ಕದವ ಬಿರಿದು ಬಿಚ್ಚಿ
ಮೋಹ ಮಂತ್ರದಿಂದ ಮೆಚ್ಚಿ
ಪ್ರೇಮದೊಂದು ಹಣತೆ ಹಚ್ಚಿ–
ಬೆಳಗಿ ನೋಡಿದೆ;
ಭಾಗ್ಯದೊಂದು ಬೆಳಕದೆಂದು
ಹಿಗ್ಗಿ ಹಾಡಿದೆ!

೨

ಬೆಳಕ ಕಂಡು ತವಕಗೊಂಡು
ಎದೆಯ ಹೊಕ್ಕನು;

ಸ್ನೇಹವೆರೆದು ಮೋಹ ಮೆರೆದು
ನಗಿಸಿ ನಕ್ಕನು;

ತಿಳಿದು ತಿಳಿಯದಂತಿದೆಲ್ಲ
ಬಲಿತು ಬೇನೆ ಬಿಗಿದನಲ್ಲ!
ಅಂದಿದೊಂದು ತಿಳಿದುದಿಲ್ಲ–
ಲೇಸದೆನಿಸಿತು;

ಹರೆಯದೊಂದು ಹುರುಪಿನಿಂದ
ಮೋಸವಾಯಿತು.

CC-0. Jangamwadi Math Collection. Digitized by eGangotri

೩

ಕಾಣುತಿಹುದು ಕುರುಡಳಿಹೆನು
ಕಣ್ಣು ಕಟ್ಟಿದೆ ;

ಸಿಲುಕಿ ಸೋತೆ ಸೆಳೆತದಂತೆ
ಕೆಲಸ ಕೆಟಿ ದೆ;

ಹುಚ್ಚದೆಂದು ತಿಳಿಯದಿದ್ದ
ಎಚ್ಚರೊಂದುವಂದು ನಿದ್ದೆ
ನಿತ್ಯನಿಬಿಡನಿಶಿಯೊಳಿದ್ದೆ–
ಎಲ್ಲು ನಿರ್ಜನ !

ಎದೆಯ ಬಡಿದು ಮೊರೆಯನಿಡಲು
ಕಂಠಶೋಷಣ !

೪

ಮನವನೆಲ್ಲ ಮಥಿಪೆಯಲ್ಲ
ಮಾರಿ ಮನ್ಮಥ !
ಎದೆಯಗೂಡ ಕಡೆಯಬೇಡ
ವಂದನಾರ್ಪಿತ !

ಸತ್ಯವಾಗಿ ಸದಯನಲ್ಲ
ಹಂತ ! ಹೃದಯವೆಂಬುದಿಲ್ಲ
ಮತ್ಸರಿಸುತ ಮನವನೆಲ್ಲ
ಮಥಿಸುತಿರುವೆಯಾ?

ಜಗದ ಜೀವಜಾಲದೆದೆಯ
ಕುದಿಸುತಿರುವೆಯಾ?

CC-0. Jangamwadi Math Collection. Digitized by eGangotri

೫

ನಂಬಿ ನಿನ್ನ ಹಿಗ್ಗಿದೆನ್ನ
ಹಿಂಡಿ ಹಿಸುಕಿದೆ ;

ಅಯ್ಯೊ! ನೋವು, ಸತ್ಯ ಸಾವು!
ಮಂಜು ಮುಸುಕಿದೆ!

ಸುತ್ತಿ ಸುಳಿದು ಬಂದ ಜೀವ
ಪಡೆಯುತಿತ್ತು ಶಾಂತ ಭಾವ,
ಸ್ವಸ್ಥ ರೀತಿಯಿಂದಲಿರುವ–
ಎದೆಯನೊತ್ತಿದೆ;

ವ್ಯರ್ಥ ನೀ ನಿರಾಸೆಯುಣಿಸ
ಮನಸಿ ಮೆತ್ತಿದೆ.

———

CC-0. Jangamwadi Math Collection. Digitized by eGangotri

ಊರ್ಮಿಳಾ

ಆದಿಕವಿ ವಾಲ್ಮೀಕಿ ರಾಮಾಯಣಾಮೃತದಿ
ಸಾಹಿತ್ಯ ಸುಮನಸರ ಸೊಗಬಡಿಸಲಿಲ್ಲವೆ ?
ಸವಿಯುಣಿಸಲಿಲ್ಲವೆ ? ನಿಜವೆನ್ನಿ, ಶರಣೆನ್ನಿ !
ಹಿಂದಲ್ಲ ಇಂದಿಲ್ಲ ಮುಂದಿಗೂ ಎಂದಿಗೂ—
ಆ ಕವಿಯೆ ಆದಿಕವಿ ; ಅದೆ ಚಿರಂತನಕಾವ್ಯ.
ಓ ಭವ್ಯ ಕಾವ್ಯರ್ಷಿ ! ಕರುಣೆಯಲಿ ಕಳೆಗೊಂಡ
ಸರಸತಿಯು ತಾನರಸಿ, ನಿನ್ನ ನಾಲಿಗೆ ತುದಿಯ
ತಾನೇರಿ ನಲಿಯುತಿರೆ, ಮಂದಹಾಸವ ಬೀರಿ
ಕಾವ್ಯ ಸೃಷ್ಟಿಯ ತೋರೆ, ತನ್ನನೇ ತಾ ಮರೆತೆ ;
ರಾಮನಾಮಾಮೃತವ ಪುಣ್ಯಪಾವನಕಥೆಯ
ಅಪ್ರತಿಮ ಸಂಪ್ರತಿಯ ಬರೆಬರೆದು ಹರ್ಷಿಸಿದೆ,
ಹಾಡಿಕೊಂಡಾಡಿಸಿದೆ. ಸಂಸ್ಕೃತದ ಕೃತಿರಚನೆ—
ಯಲಿ ನೀನು ಕಾಳಿದಾಸಗೆ ಗಣ್ಯಗುರುವೆಂದು
ರಸಿಕಲೋಕವೆ ನಿನಗೆ ತಲೆವಾಗುತಿಹುದಯ್ಯ !

ಸಾಗರದಿ ಮುಳುಮುಳುಗಿ ರತ್ನಗಳ ತೆಗೆತೆಗೆದು
ತಿಕ್ಕಿತೋರಿಸಬೇಕು, ಚೆಲುವ ಚೆಲ್ಲಿಸಬೇಕು ;
ರನ್ನಕಂಟಿಯ ಮಾಡಿ, ನಲ್ಮೆ ನೀತಿಯ ನೋಡಿ
ಪ್ರೀತಿಗೀತಿಯ ಹಾಡಿ ಕೊರಳಿಗರ್ಪಿಸಬೇಕು !
ಜಗದಿ ಜೀವನದೊಳಿದು ಪುಣ್ಯಪೌರುಷದ ಪಥ,
ಪ್ರಕೃತಿ ದೇವಿಯ ಸತ್ಯಪ್ರೇಮಮಯಪೂರ್ಣರಥ !
ಅಹುದಯ್ಯ ! ಇಷ್ಟೆಲ್ಲ ರಸಿಕ ರಾಜ್ಯದ ಮಾತು—
ಈ ನುಡಿಯ ಕನ್ನಡಿಯೊಳೆನ್ನಮುಖ ಕಾಣುವುದೆ ?
ನಾನೋರ್ವನರಸಿಕನು ; ಸಾಗರದಿ ಮುಳುಗಿರಲು

4 CC-0. Jangamwadi Math Collection. Digitized by eGangotri

ಕಸಕಡ್ಡಿಯನು ತಿಳಿದೂ ತೆಗೆದು ನಾ ತೋರಿದೆನು.
ಅಂತಿರಲಿ, ಆ ಕವಿಯ-ಆ-ಆದಿಕಾವ್ಯವಹ
ರಮ್ಯ ರಾಮಾಯಣವ ನೀವೆಲ್ಲರೋದಿಹಿರಿ,
ಪದದರ್ಥ ಭಾವನೆಯ ಸವಿಯ ಬಲು ಸವಿದಿಹಿರಿ,
ಆದರವನಕ್ಷಮ್ಯದಪರಾಧ ತಿಳಿದಿದೆಯೇ ?

—ಇರಬಹುದು—ನಿಮಗೆಲ್ಲ ತಿಳಿದು ಮರೆತಿರಬಹುದು ;
'ನಮಗರಿಯದಿಹ ವಸ್ತು—ಇವಗೆಂತು ಹೊಳೆದತ್ತು',
ಎಂದೆನ್ನ ಕೆಣಕುವಿರಿ—ಅದಕಾಗಿ ಬೇಡುತಿಹೆ,
ನಿಮಗೆಲ್ಲ ತಿಳಿದಿತ್ತು—ತಿಳಿದೂ ಮರೆತೇ ಹೋಯ್ತು ;
ಎನಗೆಂದು ಮರೆಯದಿದೆ, ಮನವೆಲ್ಲ ಮರುಗುತಿದೆ ;
ಕಡು ಕಠಿಣಹೃದಯನಾ ಕವಿಯೆಂದು ತೋರುತಿದೆ !
"ಭಾವನೆಯ ಬಿಂಬದಲಿ, ಬಣ್ಣನೆಯ ಬೆಡಗಿನಲಿ,
ಪಾತ್ರ ಪೋಷಣೆಯಲ್ಲಿ ಕೃತಿ ಚಮತ್ಕೃತಿಯಲ್ಲಿ,
ರಂಜನೆಯ ರಾಗ ರಸ ರಮಣೀಯ ರೀತಿಯಲಿ
ಅದ್ವಿತೀಯನು ಕವಿಯು—ವಲ್ಮೀಕತನುಭವನು—
ಕೌಂಚ ಮಿಥುನದ ಮೇಳನವು ಮುರಿಯೆ, ಬಲು ನೊಂದ
ಸದಯ ಹೃದಯನ—ಋಷಿಯ—ಕಠಿಣಕವಿಯೆನಬಹುದೆ ?
ನಿನ್ನ ಮಾತಿದು ಕಠಿಣ ; ಅವನ ಕೃತಿಯಲಿ ಕರುಣ—
ರಸವೆ ರೂಪಾಂತಿಹುದ ಕಾಣಲಾರೆಯ ಮರುಳ ?...."

ಪಿತೃವಾಕ್ಯಪಾಲನೆಗೆ ಶ್ರೀರಾಮ ಸತಿಸಹಿತ
ಕಾನನವನೈದಲ್ಕೆ, ಅಗ್ರಜನನನುಸರಿಸಿ
ಹಸಿವು ತೃಷೆ ನಿದ್ರೆಯಾಹಾರಗಳ ದೂರಿರಿಸಿ
ಹಗಲಿರುಳು ಸೋದರನ ಸತ್ಯ ಸೇವೆಗೆ ತನುವ
ಸವೆದ ತರುಣನ, ಯೋಧವರ ವೀರ ಲಕ್ಷ್ಮಣನ
ಅರಿಯದವರಾರುಂಟು ? ಧನ್ಯರಾಮಾನುಜನೆ !
ನೈಷ್ಠಿಕ ಬ್ರಹ್ಮಚರ್ಯಾದಿ ಬೆಂದ ನಿನ್ನೊಡಲ

CC-0. Jangamwadi Math Collection. Digitized by eGangotri

033,1NRAx M3

ಬಿಸಿಯುಸುರು-ವೀರವಿರಹದ ಕಹಳೆಯೂದುತ್ತ-
ಅಂತಃಪುರದ ದೃಢಕವಾಟವನ್ನೊಡೆಯುತ್ತ
ಸಾಕೇತನಗರದಲಿ ಆ ಸತಿ ವಿಯೋಗಿನಿಯು
ಆ ಚಿರಂತನ ಸಹ್ಯವಿರಹಿಣಿ ತಪಸ್ವಿನಿಯು
ಬಳಿ ಸೇರಿ, ನೆಲೆಯೂರಿ ಮೌನ ಮಂತ್ರಿಸುವಂದು-
ವಿರಹದುರುವೇದನೆಯು ಹೆಂಗರುಳ ಕೊರೆಯುವುದ
ನೀನಲ್ಲದನ್ಯರಾರ್ ತಿಳಿದಿಹರು ? ಬ್ರಹ್ಮಚಾರಿನ್!

ಕರುಳ ಕೊರೆಯುವ ವಿರಹದುರಿಯ ಬರೆದುಬ್ಬಿಸುವ-
ಕವಿಯಹುದು ವಾಲ್ಮೀಕಿ! ಜಾನಕಿಯು ಜಾನಿಸುತ
ರಾಮ ಗುಣನಾಮದಲಿ ಬಲು ಬೆಂದು ಬಡವಾಗಿ
ಒಸವಳಿದ ಬವಣೆಗಳನೆನಿತು ಬಣ್ಣಿಸಲಿಲ್ಲ ?
ಹದಿನಾಲ್ಕುವರುಷಗಳ ಬಲುದೂರ ಕಾಡಿನಲಿ
ಕಳೆಯಲ್ಕೆ ಹೊರಹೊರಟ ಸಿರಿಮೊಗದ ನೀರನನು,
ಭೋಗ ಭಾಗ್ಯದ ಬಂಧನವ ಬಿಸುಟ ಬಂಧುವನು,
ತನ್ನ ಪತಿಯನಂ, ತರುಣ ಸುಂದರ ಸ್ವರೂಪನನು,
ನಯನಮನಮೋಹನ ಮನೋಹರ ಮನೋಜನನು-
ಕಾಡಿಗೋಡುವ ಕಾಲದಲಿ ಕಂಡು ಮನನೊಂದ
ಆ ಊರ್ಮಿಳಾದೇವಿಯೊಂದುವೊಂದೇ ಮಾತು !
ಸಹ್ಯವೇದನೆಗಾಗಿ ಸಾಂತ್ವನದ ಸವಿಮಾತು !
ಒಮ್ಮೆ ಕರುಣಾದೃಷ್ಟಿ ! ಅಶ್ರುಧಾರಾವೃಷ್ಟಿ !
ಕರೆಸಲಿಲ್ಲಾ ? ಕವಿಯು-ಕಠಿಣನಲ್ಲಾ ?

ಎಣೆವಕ್ಕಿ ಬೇರಾಗೆ ಅದಕಾಗಿ ಮರುಗಿಹನು,
ಪಕ್ಷಿಹೃದಯುದ ಬೇನೆಯರಿತು ಬಲು ಬರೆದವನು,
ಮೂಕ ಸೃಷ್ಟಿಯೊಳಾದರಿನಿತು ಕರುಣಿಪ ಕವಿಯು,
ಪ್ರೇಮಪಿಂಡದೊಳಿಂತು ಪ್ರೀತಿದೋರುವ ಋಷಿಯು,
ಹಾ ಹಂತ ! ಇದನಿಂತು ಮರೆಯಬಹುದೆ ಮಹಾಂತ ?

JNANA SIMHASAN JNANAMANDIR
LIBRARY.

Jangamwadi Math, VARANASI.
Acc. No. 3781......
CC-0. Jangamwadi Math Collection. Digitized by eGangotri

ಕವಿಯು ಋಷಿಯೇಹುದಯ್ಯ ! ಬ್ರಹ್ಮರ್ಷಿ ಇರಬಹುದು !
ಒಳಿತಾಯ್ತು ಆ ಸಿದ್ಧಿ–ಕಂಡ ಕಾವ್ಯಸಮಾಧಿ !
ಆದರವನಲಿ ಮನುಷ್ಯನ ಧೃದಯವಿಲ್ಲೇನು ?
ಮಾನವನೆ ತಾನಾಗಿ, ಮನುಜರೆದೆ ಬಿರಿದೆದ್ದ–
ಸ್ವರ್ಣ ಸುಂದರ ಪ್ರೇಮದಾ ಪ್ರವಾಹವ ಮರೆತ !
"ಹದಿನಾಲ್ಕು ವರುಷಗಳು ಆ ಊರ್ಮಿಳೆಯ ಮುಖವ,
ದೀನ ದಿವ್ಯಜ್ಯೋತಿ ಜಗಜಗಿಸುತಿಹ ಪರಿಯ–
ಕಾಣುವುದೆ ಅಳವಲ್ಲ ! ರವಿಯೇನು ? ಕವಿಯೇನು ?"

ಓ ಮಾತೆ ! ಚಿರತಪಸ್ವಿನಿ ಭಾಗ್ಯಭಾರತಿಯೆ !
ನಿನಗಂದು ನೀರನಿಗೆ ಆ ವೀರವರ್ಯನಿಗೆ
ವನವಾಸದಾಯಾಸ ಸಂಪೂರ್ಣ ಪರಿಹರಿಸೆ
ಮಂಗಳಾರತಿಯೆತ್ತಿ ಸುಮಹೋತ್ಸವದಿ ನಲಿಯೆ–
ಚೇತನವದೆಲ್ಲಿಂದ ಬಂತವ್ವ ? ಆ ಚೆಲುವ
ಚೆನ್ನಿಗನ ಕಂಡೆಯಾ ? ವಿದ್ಯುದ್ವಿಲಾಸದಲಿ
ಚೈತನ್ಯವಾಕ್ಷಣದಿ ಚೆಲ್ಲಿ ಚೇತರಿಸಿತೆ ?
ಇರಬೇಕು ! ಇಂತಲ್ಲದಿನ್ನೆಂತು ಬರಬೇಕು–
ಹೇಳಮ್ಮ ? ಅಜ್ಞಾತವಾಸದಲಿ ನೀನಿಂತ
ನಿಶ್ಚಲ ನಿರಾತಂಕನಿಷ್ಠೆ ನೆನಪಾಗುತಿದೆ !
ಒಂದೊಂದು ದಿನದಿನವು, ಮುಂದೊಂದು ಕ್ಷಣ ಕ್ಷಣವು,
ನಿನಗೆಷ್ಟು ಕಷ್ಟ ಯುಗಯುಗವಾಗಿ ಸಾಗಿಲ್ಲ ?
ರಸಿಕರಾಜ್ಯದ ರಮಣರಿದಕೆ ಮಂಕಾಗರೆ ?
ಅರಸಿಕನು–ನಾನೆಂತು ಬರೆವೆ ಕ್ಷಮಿಸೌ–ತಾಯೆ !

———

CC-0. Jangamwadi Math Collection. Digitized by eGangotri

ಶೂದ್ರಕಗೆ

ಸುರನರೋಭಯಲೋಕಜೀವನವ ಜತೆಗೆಯ್ದು
ಭವಭೂತಿ ಕಾಳಿದಾಸರ ನಾಟಕಗಳೋದಿ
ಸಾಹಿತ್ಯ ಸವಿಯುಂಡು–ರಸಲೋಕ ಕೊಬ್ಬುತಿದೆ!
ಆದೊಡೇಂ ಶೂದ್ರಕನೆ! ನಿನ್ನಂತೆ ಎನ್ನಮನ–
ವಂ ಸೂರೆಗೊಂಡವರು ಬೇರಿಲ್ಲ, ನಿಜ ಸಮಾ–
ಜದ ಚಲನ ಚಿತ್ರವಂ ತೆಗೆಮೊಗೆದು ತೋರಿಸಿದ
ಸಾಹಸಿಕರವರಲ್ಲ, ಸಂಸ್ಕೃತ ಸುನಾಟ್ಯ ಮಂ–
ದಿರವ ಬೆಳಗುವದೊಂದೆ ನಿನ್ನ ರೂಪಕ ದೀಪ.

ಜಡಶಾಸ್ತ್ರಿಗಳೊ ಪೂರ್ವ ಪೌರಾಣಿಕರೊ, ಕೆರಳಿ
'ಮೃಚ್ಛಕಟಿಕ'ವ ಮುರಿಯೆ ದಂಡುದೂಡಿರಬಹುದು!
ಸುಂದರ ಕಲಾಕೃತಿಯು, ಭಾವನಾ ಸಂಸ್ಕೃತಿಯು
ರಸ ಶತ್ರುಗಳು ತೆಗಳೆ ಕುಂದುಂಟೆ? ಕವಿರಾಜ!
ಮಾತೆ ಭಾರತಿ ನಿನ್ನ ಕಾವ್ಯ ಕುಸುಮವನಾಯ್ದು
ವರಕಿರೀಟದೊಳಿಂತು ಮೆಚ್ಚಿ ಮುಡಿದಿಹಳಲ್ತೆ!

CC-0. Jangamwadi Math Collection. Digitized by eGangotri

'ಬೇಡುವೆಂ : ಚಂದ್ರವಂಶದ ಕುಡಿಯು ಕಾಪಾಡು'

ನೋಡಯ್ಯ ! ಲೋಕವಂ ಬೆಳಗಿ ಬಹ ಉದಯರವಿ-
ಯಂದದಲಿ, ಅರುಣ ಕಿರಣದ ಕಾಂತಿ ಪಸರಿಸುತ
ತೆರೆಮೇಲೆ ಹೊಳೆಹೊಳೆದು ನಲಿಯುತಿಹ ಬಾಲನನು !
ಮುದ್ದು ಮೊಗದಿಂ ಹೃದಯದಲಿ ನಿಂದ ನಿತ್ಯ ನೈ-
ರ್ಮಲ್ಯಮಂ ಮೆಣ್ಸವಿಯ ಸೂಸುತೆ ಶುಚಿಸ್ಮಿತದಿ
ಹರಿವ ಹೊನಲಿಗೆ ತನ್ನ ಮೈವೆಳಗನೊಲಿದಿತ್ತು
ಮಾತೆ ಮಂದಾಕಿನಿಯ ಮಡಿಲ ಮೇಲ್ಪವಡಿಸಿದ
ಸೌಂದರ್ಯ ಮೂರ್ತಿಯನು ! ಸೂರ್ಯ ಸುಕುಮಾರನನು !

ಆರಲ್ಲಿ ದಡದಮೇಲ್ನಿಂತಿಹಳು ?
ಸಂಭ್ರಮದಿ
ವಿಭ್ರಾಂತಳಾಗಿಹಳು ! ಅವಿಚಾರವರ್ತನೆಗೆ
ನಾಚಿ ನಡುಗುವಳೇನೋ? ಕನ್ನಿಕೆಯು-ಕುಂತಿಯೆ ?
ಸುಂದರ ಸುಪುತ್ರನನು ಪಡೆದರೂ, ಮುದ್ದಾಡಿ
ಮೊಲೆಯೂಡಲಾರದಿಹ ನಿರ್ಭಾಗ್ಯೆ! ತಿಳಿತಾಯೆ !
ವಿಶ್ವ ಸೋದರನಿವನು-ವಿಶ್ವಾತ್ಮ ಸಲಹುವನು !

ಮಾತೆ ! ಮನಮರುಗದಿರು ;
ವಿಶ್ವದ ವಿಶಾಲತೆಯ
ಕಡೆಗಾಗಿ ಸಾಗುವನು, ತಡೆಯಲಾರಳವುಂಟೆ ?
ಬಲವಂತವೈ ಸೆಳೆತ ! ಎನಿತೆನಿತೊ ದೀನಜನ-
ರಿವನು ಬರಲಿಹನೆಂದೆ ಹಗಲಿರುಳು ಹಾರೈಸಿ
ಹರಕೆಹೊತ್ತಿಹರವ್ವ ! ತ್ಯಾಗಮೂರ್ತಿಯ, ದಾನ
ಶೂರನಿವ ಬಂದೊಮ್ಮೆ ಬೆಂದೊಡಲ ತಣಿಸುವನೆ-

CC-0. Jangamwadi Math Collection. Digitized by eGangotri

ಎಂದೆನುತ ಹಾತೊರೆದು ಕಾದಿರಲು, ನಿನ್ನದೀ
ಸ್ವಾರ್ಥಸಂಕುಚಿತ ಪ್ರೇಮದ ಸೆರೆಗೆ ಸಿಲುಕುವನೆ ?
ನೀಂ ಪಡೆವೆ ವೀರರನು
ರಣಮತ್ತಧೀರರರನು;
ರಾಜಾಧಿರಾಜರನು—ಆದರದೊ ! ಬಾಯ್ಬಿಟ್ಟು
ಬೊಬ್ಬಿಡುವ ಬಡಮಂದಿಗಾರು ಗತಿ ಹೇಳವ್ವ?
ಪುಣ್ಯಪಾವನ ಜಲತರಂಗೆ ಗಂಗೆಯು ದಿವ್ಯ
ಕರ ಕಮಲವರಳಿಸುತ ಸಾಗಲೈ ಸೂರ್ಯಸುತ !
ಸಾಗಲೈ ! ವಿಶ್ವದ ವಿಶಾಲತೆಯ ಕಡೆಯತ್ತ—ದೃಢಚಿತ್ತ!....

X X X

ರಾಜಕುಲದಲಿ ಹುಟ್ಟಿ, ಚತುರಂಗ ಬಲಕಟ್ಟಿ,
ಧನದರ್ಪದಿಂ ಮೆಟ್ಟಿ ಒಡೆತನವ ಪಡೆದವರು
ಹಲವರೈ ! ರಾಜೇಂದ್ರ ದೇವೇಂದ್ರರೆಂದಿಂತು
ವಂದಿ ಮಾಗಧರಿಂದ ತಮ್ಮ ಬಿರುದಿನ ಪಾಡ
ಹಾಡಿಸುತ, ಕೇಳಿ, ತಲೆದೂಗಿ, ಸುಖಸಾಮ್ರಾಜ್ಯ—
ವಾಳಿದವರೈ ಕೆಲರು !
ಹೋದಂದು, ಚಿತ್ರಸಿಂ—
ಹಾಸನವು ನೆಲದಡಿಗೆ, ಛತ್ರಚಾಮರ ವಾಗ—
ಸದ ಕಡೆಗೆ, ರತ್ನಮಕುಟವು ಹಗೆಯ ಕಾಲಡಿಗೆ—
ಉಳಿಯಿತೇ ಹಿರಿಹೆಮ್ಮೆ? ನಿರ್ನಾಮವಾಯ್ತೊಮ್ಮೆ!
ಮೇಣವರ ಕಿರಿಕೂಗ ಕನಸಿನಲ್ಲಾದರೂ—
ಕೇಳಿ, ಕಳವಳಗೊಂಡು ಕತೆಯು ಕಟ್ಟಿದರಿಲ್ಲ !
ಮುಂದೆ ಹೊಗಳಿದ ಮಂದಿ ಹಿಂದೆ ತೆಗಳುವರೆಲ್ಲ !
ಸಂದವರ ಸಂಗಡವೆ ಸಂದು ಪೋಪುದು ಹೆಸರು ;
ಬೆಂದವರ ಬೆಂಬಳಿಯೆ ಬೆಂದು ಹೋಗರು ಜನರು.

X X X

CC-0. Jangamwadi Math Collection. Digitized by eGangotri

ಎಲ್ಲೆಲ್ಲು ಕಲಿಕರ್ಣನಂ ಹೊಗಳದವರಿಲ್ಲ ;
ಚಂದ್ರಾರ್ಕರಿರುವನ್ನ ಕರ್ಣಕರ್ಣದೊಳವನ
ಗಂಭೀರ ಗುಣಗಣರವಂ ಗುಣಿಸಿ ಗುಡುಗುವುದು.
ಅಜ್ಞಾತ ಕುಲಗೋತ್ರನೆನೆ ಜಗದ ಮರೆಯಲ್ಲಿ
ಬಡಬೆಸ್ತ ಗುಡಿಸಲಲಿ ಬೆಳಗಿದನು ಬಾಲ್ಯದಲಿ.
ಸುಡುವ ಕೆಂಡವ ಬೂದಿ ಮುಚ್ಚಿದ್ದೊಡೇನಂತೆ ?
ಸ್ವಾತಂತ್ರ್ಯ ಶಕ್ತಿಯಿಂ ಪೌರುಷದ ಪಥವಿಡಿವ
ಕೆಚ್ಚೆದೆಯ ಕಲಿಯುವಗೆ ತಡೆಯುಂಟೆ ನಡೆವಲ್ಲಿ ?

ರಾಧೇಯನಿಂದಿಂತು–
ಹೀನೈಸಿ ಹೇಳುವಿರೆ ?
ಕೀರ್ತಿ ಕೌಮುದಿಗೇನು ಕೊರತೆ ಕಂಡಿರೆ ಜನರೆ ?
ಚಂಡಕಿರಣವ ಕಂಡು ಕಣ್ಣುಕಿಕ್ಕಿ ಗೂಗೆಗಳಂ
ಬೆಳಗುತಿಹ ಭಾಸ್ಕರನ ಪಳಿದರೇಂ ಫಲವುಂಟೆ ?
ತನ್ನೆದೆಯ ವೀರ ಪೌರುಷ ಬೀರಿ, ಹೆಸರಾಂತು–
ಸಾಕಿ ಸಲಹಿದ ಮಾತೆಯೊಡಲ ತಣಿಸಿದನಲ್ತೆ !

ಏಂ ಸಾಹಸವೊ ?
ರುದ್ರಶಿಷ್ಯ–ಭಾರ್ಗವ–ಪರಶು
ಧರ ರಾಮನೊಳೆ ಧನುರ್ವಿದ್ಯೆಯುಂ ಪಡೆದನ್ನೆ !
ಮಾನಧನ ಫಣಿರಾಜಕೇತನನ ಕುರುವಂಶ–
ಕೇತು ಕೌರವ ಭೂಮಿಪನ ಕೆಳೆಯು ಕೊಂಡನ್ನೆ !
ಗುಣಕೆ ಮತ್ಸರವುಂಟೆ ಗುಣಿ ಕೌರವೇಂದ್ರನಲಿ ?
ಹೃದಯಹೃದಯುಗಳೊಂದೆ ಬೆಸುಗೆಗೊಂಡವು ;
ಅಂಗರಾಜ್ಯದಿ ಮುಕುಟಧರನಾಗಿ ಧೀರ ದು-
ರ್ಯೋಧನಗೆ ಬಲಿತ ಬಲಗೈಯ್ಯಾಗಿ ಮೆರೆದನ್ನೆ !

CC-0. Jangamwadi Math Collection. Digitized by eGangotri

ಅಂಗರಾಜಾ !

ನೀನುಂ ಭುವಿಬೆಳಕ ನೋಡಲ್ಕೆ
ಕವಚಕುಂಡಲ ಧರಿಸಿ ಬಂದುದಲ್ಲದೆ, ಅಮೃತ
ಹಸ್ತವಂ ಹಿಡಿದೆತ್ತಿ ಹೊರಟೆಯಾ ? ಕೊಟ್ಟನಿತು
ಕೋಶವಿಮ್ಮಡಿಸಿತಲ ! ಮುಮ್ಮಡಿಯು ನಾಲ್ಮಡಿಯು
ನೀನೀವ ನಿಃಸ್ವಾರ್ಥಿಯೆಂದರಿತೆ ?

ನಿಜವಾಗಿ

ಜಗಜೀವ ತಣಿದತ್ತು ! ನಿಜನಾಮ ನೆಲೆಯಾಯ್ತು !

ಇವನಾರ್ಗೆ ಬಂದವಂ ?

ಬಡ ಬರಡ ಹಾರುವಂ ;
ಕಣ್ಣಿವೆಯನಿಕ್ಕದಿಹ ! ಮನುಜನಲ್ಲೈ-ದೇವ !
ರೂಪ ಮರೆಸುತ ಬಂದೆ ಮಾಯಾವಿ ! ನಿನಗಿಂತುಂ
ದುರ್ವಿಧಿಯೇ ? ದೇವೇಂದ್ರನೆಂಬವಂ ನೀನಲ್ತೆ ?

ಹೆಂಬೇಡಿ !

ನಿಜಸುತಗೆ ! ಪಾರ್ಥಂಗ, ಕಲಿಕರ್ಣ–
ನೀಂ ಕೆಡುಕ ಶಂಕಿಸುತ ವಂಚಿಸಲ್ಬಂದಿಹೆಯ ?
ಸತ್ಯಹೃದಯನ ಹೃದಯಕಂಟಿರುವ ಕವಚವಂ
ಕೇಳುವೆಯ ? ಕಲಿತನವ ಕಳುವೆಯಾ ? ನಿಷ್ಕರುಣಿ !

ಹುಟ್ಟಿದಂದೇ ತನಗೆ ತೊಟ್ಟು ಕಳುಹಿದ ಕವಚ
ಬಿಗಿಯಾಗಿ ಬಿಗಿದಿತ್ತು; ಬಳೆದಂತೆ ಬೆಳೆದಿತ್ತು !

ಬಗೆದನೇ ಕಲಿಕರ್ಣ ?

ಕೊಡಲಾರೆನೆಂದನೆ ?
ಚರ್ಮಕಂಟಿರುವ ಕವಚವ ಸುಲಿದು ಸೆಳೆದೀಯೆ,
ರಕುತ ಚಿರಿಚೆಲ್ಲುತಿರೆ ! ನೊಂದಿಲ್ಲ ! ನವೆದಿಲ್ಲ !
ತಾನಮೃತವರ್ಷದೊಳೆ ನಾಂದಂತೆ ನಲಿದನ್ನೈ !

X X X

CC-0. Jangamwadi Math Collection. Digitized by eGangotri

ಸತ್ಯಬಂಧವ ಕಡಿದು, ಛಲ ದುರಾಗ್ರಹ ಹಿಡಿಯೆ,
ಕ್ರಾಂತಿಕಾಳಿಯು ಕದನ ಕೋಲಾಹಲಕೆ ಕೂಗಿ
ಕರೆದಳ್ಕೆ ಪಶುಗಳಂ ಯುದ್ಧಯಜ್ಞದ ಬಲಿಗೆ!
ಪಾರ್ಥಿವರ ಪಂಥವೋ ? ರಸೆಯ ಮೇಲಾಸೆಯೊ?
ಕೌರವರ ಪಾಂಡವರ ಹೋರಾಟ ಹಿರಿದಾಗೆ,
ಮತ್ಸರವೆ ಮರವಾಯ್ತು! ವೈರಶಾಖೆಗಳಾಯ್ತು!
ವಿಷಮ ವಿಷಫಲವುಣ್ಣಲಷ್ಟಾದಶಾಕ್ಷೌಹಿ-
ಣೀ ಸೈನ್ಯವಾದರದಿ ಬಾಯ್ದೆರೆದು ನಿಂದಿತ್ತು!

ಮೃತ್ಯು ಮುಂದಡಿಯಿಡುತೆ, ತುತ್ತುಗೊಂಬವಸರದಿ
ಕಿತ್ತುಕೊಳಲಾರಳವು ಕವಳವನು ? ಕೌರವನು
ಕಾದುವುದೆ ಕಡೆಯೆಂದು, ಗೆಲವಾಗೆ ಜಯಭೂಮಿ-
ಸೋತೊಡೇಂ ಸುರಪದವಿಯೆಂಬ ಹಠ ಹಿಡಿದಿರಲು,
ಭೀಮ ಭೀಮಾರ್ಜುನರು ಭಾಷೆಯಂ ಬಿಗಿದಿರಲು ;
ಮಿತ್ರಕಾರ್ಯಕೆ-
ಶಸ್ತ್ರವೆತ್ತಿ ನಿಂದಂ ವೀರ!

X X X X

ಸಂಧಿಯೇಂ?
ಸಮರ ಸಂಬಂಧವನೆ ಸರಿಗೊಳಿಸೆ
ಬಂದನಲ್ಲಾ ಕೃಷ್ಣ! ಕುಟಿಲನೀತಿಯ ನಿಪುಣ!
ಏಕಾಂತಕೇಕಾಂಗವೀರ ಕರ್ಣನ ಕರೆದು
ಕಿವಿಯೊಳೂದಿದನಿಂತು ಮಂತ್ರಮಂ : "ಹೇ ವೀರ!
ನೀನಲ್ತೆ ಮಾತೆ ಕುಂತಿಯ ಹಿರಿಯ ಸುಕುಮಾರ!
ಕುರುಕುಲದ ಪೀಳಿಗೆಯ ಪುಣ್ಯ ಪಟ್ಟವನೇರೆ
ನೀನೊಡಂಬಡ ಬಾರ! ಬಳಿನಿಂತು ಬರಿದಿಂತು
ಕೌರವನ ಬಾಯ್ದಂಬುಲವ ಬಯಸುವೆಯ? ಬಗೆಯ!"

CC-0. Jangamwadi Math Collection. Digitized by eGangotri

ಕೊಂದನ್ನೆನಯ ದೊರೆಯು–

ಕೌರವೇಂದ್ರನನೆಂದು,
ನೊಂದನಲ್ಲದೆ ತಲೆಯ ತೂಗಿದನೆ? ಸೂತಸುತ–
ನಲ್ಲ ತಾಂ, ರಾಜವಂಶದ ಪುಣ್ಯಪಾರ್ಥಿವಂ
ನಿಜವೆಂಬ ನುಡಿಗೇಳಿ, ಸ್ವಾರ್ಥಸಂಭ್ರಮ ತಾಳಿ
ಸಾರ್ವಭೌಮತ್ವವಂ ಬಯಸಿದನೆ ? ಸಿಡಿಲು ಬಡಿ–
ದಂತಾಗೆ ಸಖನ ನಲ್ಮೆಯ ನೆನೆದು ಮರುಗಿದಂ!

"ಶ್ರೀ ಕೃಷ್ಣ! ಪರಿಪೂರ್ಣ ಪರಮಾತ್ಮ ನೀನೆಂದು
ನಂಬದಿಹುದೆನ್ನಳವೆ? ನೀನೆಂದ ನುಡಿಯೊಂದೂ
ಸಟೆಯೆನುವ ಹಟವಿಲ್ಲ; ಆದೊಡೇಂ ತಿಳಿದಿಂತು
ಜೀವನ್ಮೃತನ ಮಾಡಿ ಕೆಡಿಸಿದ್ಯೆ ? ಪಟ್ಟವನೆ
ಕಟ್ಟುವೆಯ? ರಾಜ್ಯಗೀಜ್ಯಗಳೆನಲು, ಬಯಸಿ, ಬಾ–
ಯ್ಬಿಡುವಂತು ಹೀನ ಹೃದಯನೆ ? ತಿರುಳ ತಿಳಿದಿರೆಯ ?
ಜೀವಮಿತ್ರಂ ಕರ್ಣನೆಂದು–

ನಂಬಿದನಯ್ಯೊ!
ಕುರುಕುಲಾಗ್ರಣಿಯೆನ್ನ! ನೀಂ ಕೃತಘ್ನನ ಗೈದೆ!

ಶ್ರೀ ಲೋಲ! ನೀಂ ಜಗದ್ರಕ್ಷಕಂ ನಿಂದಿಂತು
ಜೀವಪಾಂಡವರೆಂದು ಪರಿಪಾಲಿಸುತ್ತಿರಲು
ಸೋದರರ ಸಂರಕ್ಷಿಸುವ ಭಾರವೆನಗುಂಟೆ?
ಋಣವೊಂದು–

ಕೌರವಂ ಸಾಕಿಸಲಹಿದನನಾ–
ಥನನೆನ್ನದರಿನಾಂ ಸ್ವಾಮಿಕಾರ್ಯದೆ ಮಡಿವೆ!
ನೋಯಿಸೆಂ—ನಂಬಿದರ !

ನಿನ್ನವರ ಪಾಂಡವರ."

ಎದೆಗೆ ಶೂಲವನಿಕ್ಕಿ ಕೊರಳ ಮುರಿದಂತಾಗೆ,
ಕಂಠ ಗದ್ಗದಿಸುತಿರೆ ಮುಮ್ಮಾತು ಬರದಾಯ್ತು!

CC-0. Jangamwadi Math Collection. Digitized by eGangotri

ಕಂಚನಿಯ ಕಿಡಿಯುದುರೆ ! ನೋಡಿ ಮುರಹರಿ ಬೆದರೆ !
ಬೆಂದ ಮೈ ಬಸವಳಿದು ಬಾಡಿ ಭುವಿಗಿಂಬಾಯ್ತು !
ಧೀರವರಗಂಭೀರ ಸತ್ಯಸುಂದರ ರವಿಜ–
ನೀ ವೀರವಿಲಸಿತ ವಚೋನಿಶಿತಶರಹತಿಗೆ
ಒಡಲಹಹ ಸುಡತಲಿರೆ ! ಕೃಷ್ಣನೆದೆತಣಿಸೆ, ಹಿಡಿ–
ದೆತ್ತಿ ಬಿಗಿದಪ್ಪಿ ಮುಂಡಾಡಿ ಕೊಂಡಾಡಿದಂ :–

"ಪೌರುಷದ ಪಥವಿಡಿದು, ವೀರಧರ್ಮದಿ ನಡೆದು,
ಕರ್ಮವಂ ಕೈಕೊಂಡು ಕಲಿತನದಿ ಕಾದಾಡು ;
ಫಲವೇಕೆ ? ಗೆಲವೇಕೆ ? ಸೋತೊಡದು ಸೋಲಲ್ಲ,
ನಿನ್ನಂತಹಗೆ ಸಲ್ಲ ; ಮುನ್ನುಂಟೆ ? ಇನ್ನುಂಟೆ ?
ಹೇ ಕರ್ಮವೀರ ಕಲಿಕರ್ಣ ! ತವನಾಮವಜ–
ರಾಮರಂ ಸತ್ಯಸುಂದರ ಮಂಗಳಂ ಮೆರೆಗೆ !"

X X X X

ಬೆಳ್ಳಿ ಬೆಳಗುವ ಹೊತ್ತು–
ಕೋಳಿ ಕೂಗುತಲಿತ್ತು,
ಚೆಲುವು ಚೆಲ್ಲುತ ಬರಲು, ಜೀವನೋಲ್ಲಸವಿರಲು,
ಜಡನಿದ್ರೆಯಂ ಮರೆದು, ನವಜೀವನವನೆರೆದು,
ಶ್ರೀ ಉಷಾಸುಂದರಿಯು-ಚೈತನ್ಯಮಯಿಯಹಾಗಿ,
ಚಿರಮನೋರಮೆಯಾಗಿ, ರುಚಿರಸೋದರೆಯಾಗಿ.
ಸಸ್ಯಶ್ಯಾಮಲೆಯಹಾಗಿ, ನಿತ್ಯನಿರ್ಮಲೆಯಾಗಿ,
ಬಾನ ಹರಿವಾಣದಲಿ ಕುಂಕುಮವ ಕೊಡಿಟ್ಟು–
ಸಂಭ್ರಮೋಲ್ಲಸದಿಂದ ಸ್ವಾಗತಕೆ ನಿಂದಿಹಳು !

ಗಂಭೀರ ಮುಖಮುದ್ರೆ ಮೆರೆಯುತಿರೆ–
ನಲವಿಲ್ಲ,

CC-0. Jangamwadi Math Collection. Digitized by eGangotri

ಗೆಲವಿಲ್ಲ, ಶ್ರೀಮುಖದಿ ಛಲವಿಷಾದದ ರೇಖೆ
ರೂಪಿಸಿರೆ, ಮುನ್ನಡವನ್ನೆ ಮೂಡುದಿಸೆವಿಡಿದು ;
ಆರಿವಂ ?

ಸೂತಸುತ ಮೇಣ್ ರಾಧೆಯಣುಗ ನಂ-
ದೆನ್ನುವಿರೆ ? ಲೋಕನಾಟಕ ಸೂತ್ರಧಾರ ನಂ-
ದೆಳೆದನಲ ತೆರೆಮರೆಯ ! ಪಾರ್ಥ ಪಾರ್ಥಿವನೀತ !

ಅರುಣೋದಯದೊಳಿಂತು, ರವಿಸೂನುವೆಚ್ಚತ್ತು,
ಪೆತ್ತಯ್ಯಗರ್ಘ್ಯವಂ ಕೊಡಲೆಂದು-ತನ್ನೆದೆಯ
ಕಿರುಬೆಳಗನಾ ಜಗಜ್ಯೋತಿಯಲಿ ಪರಮೈಕ್ಯ
ಗೊಳಿಸಲಿಹ ಯೋಗಸಾಧನೆಗೆಂದು, ಮಾತೆಮಂ-
ದಾಕಿನಿಯು ತಡಿವಿಡಿದು ಸಾಗಿರಲು-ಹೃದಯದಲಿ-
ದಿವ್ಯ ದರ್ಶನವೆಂದೊ ? ಸಂತಸದ ಸುಳಿವೊಮ್ಮೆ !
ಕರಿಣವೊದಗುವುದೆಂದೊ ? ಏನೊ ಕಳವಳವೊಮ್ಮೆ !
ಮೂಡುತಿರೆ ಬಾಡುತಿರೆ ತನುವ ಮುನ್ನೊಂಕಿದಂ !

ಶುದ್ಧಹೃದಯಂ ಬಂದು, ಶುದ್ಧಜಲದೊಳ್ನಿಂದು,
ಶುದ್ಧಾಂತರಂಗದಲಿ ಶುದ್ಧ ಮೂರ್ತಿಯ ಜಪಿಸಿ,
ಬಾಹ್ಯ ಭಾವವ ಮುಚ್ಚಿ, ಸುಖಸಮಾಧಿಗೆ ಮೆಚ್ಚಿ,
ಕೈನೀಡಿ ಮೈಗೂಡಿ ನಿಂದಿರಲು-

ಸೂರ್ಯ ಸಿಂ-
ಹಾಸನದಿನಿಳಿದೊಂದು ದಿವ್ಯದೇವತೆ ಬಂದು
ಮಸ್ತಕದಿ ಹಸ್ತವಿಟ್ಟೆಚ್ಚರಿಸಿದಂತಾಯ್ತು !

"ಜಯ ಜನನಿ !

ಸ್ವರ್ಗದಿಂದಿಳಿತಂದೆ ಹೇ ದೇವಿ !
ಬೆಂದು ಬೇಗುದಿಗೊಂಡ ಕಂದನಂ ಕಾಪಿಡಲು
ಬಂದಿಹೆಯ ? ವರದೆ ! ವರಗಳನೀಯೆ ಕಯ್ಯೆತ್ತಿ
ಕಣ್ಮುಂದೆ ನಿಂದಿಹೆಯ ?ಬೇಡೆಲೇಂ ? ಕಲಿಯಂತೆ

SADGURU VISHWARADH
...MHASAN JNANAMAND
LIBRARY
...ngamawadi Math, Varanasi
...No. 897
CC-0. Jangamwadi Math Collection. Digitized by eGangotri

ಕಾದಾಡಿ ವೀರಸ್ವರ್ಗವ ಪಡೆವೆ! ನಿಜವಿದಕೆ–
ವರವೇಕೆ ? ಶ್ರೀ ಕುರುಕ್ಷೇತ್ರ ರಣರಂಗದಲಿ
ಗಾಂಡೀವಿ ಮುಂಬಂದು ಭುಜಹೊಯ್ದು ನಿಂದಿರಲಿ!
ಶುಭಮೂಹರ್ತದೊಳಿಂತು ಬಂದೆ ನೀನಾರವ್ವ?"

ಕರಳು ಕೊರೆಯುತಲಿರಲು–
ಕುಂತಿ ಕೇಳುತಲಿಹಳು!
ಕೊರಳ ಸೆರೆ ಬಿಗಿವಡೆಯೆ, ಕಣ್ಣೀರ ಹೊನಲೊಡೆಯೆ
ಮರುಕಮಂ ಮರೆಮಾಡಿ ಹೇಳಿದಳು: " ಹೇ ಚಿನ್ನ !
ಪಾಪಿ ಪಾತಕಿಯೆನ್ನ ದೇವಿಯೆನ್ನದಿರಣ್ಣ !
ಈ ಜಗಜ್ಜೀವ ತವತಾತ ಸೂರ್ಯನೊಳಂದು
ಮೊದಲ ಪರಿಚಯವೊಂದ ಗೈಸಿದವಳಾಂ ಕಂದ!"

"ಮಾಮಮಾತೆ !
ತಿಳಿವಾಯ್ತು ! ಹೆತ್ತಕುವರಂ ತಾನು
ಸೇವೆ ಸಲಿಸಿಲ್ಲೆಂದು ಮರುಕವೇ ನಿನಗಿಂದು?
ತಾಯೆ! ತಿಳಿದಿರಲಿಲ್ಲ!
ವಾಸುದೇವಂ ಬಂದು
ಪೇಳ್ದ ಬಳಿಕಿದನರಿತೆ ! ನಿಜ ಕೃತಘ್ನಂ ತಿಳಿದೆ !
ಕಟ್ಟಿ ಜೀವವ ವಿಧಿಯು ಬಡಿದಟ್ಟುತಿರೆ, ಜನನಿ !
ಪುಣ್ಯ ಗರ್ಭದೊಳೆನಗೆ ಮಂಗಳಾಶ್ರಯವಿತ್ತೆ!
ಋಣವನಿನ್ನೆಂದು ನಾಂ ಕೊನೆಗಾಣಸಲಿ? ನಿನ್ನ
ಬರವೇನು? ಬಯಕೆಯೇಂ? ಸಲಿಸುವೆಂ ನುಡಿ ತಾಯೆ !"

"ಬಾ ಕಂದ ! ಹಿರಿ ಕುವರ
ಬಾರೆನ್ನ ಬಿಗಿದಪ್ಪು !
ಉಪ್ಪನ್ನವಿತ್ತವಗೆ ತಪ್ಪೆಣಿಸದಿರು ಮಗನೆ !
ಹೇಡಿಯೆನೆ ಹಿಂದುಳಿಯದಿರು ರಣದಿ, ಬೇಡುವೆಂ

CC-0. Jangamwadi Math Collection. Digitized by eGangotri

ಚಂದ್ರವಂಶದ ಕುಡಿಯು ಕಾಪಾಡು ; ತೊಟ್ಟ ಶರ-
ವಂ ಮರಳಿ ಮರೆತುಬಿಡು. ನಿನಗಕ್ಕೆ ಮಂಗಳಂ
ಶುಭಂ ಸುಖಂ ಪ್ರೀತಿ ಕೀರ್ತಿ ಕಲ್ಯಾಣಂ!"

* * * *

ಶ್ರೀ ಮಹಾಭಾರತವನೋದಲ್ಕೆ-
ಹಿಡಿದೆತ್ತಿ
ಕೆಳಗಿಡುವುದಕೆ ಮುನ್ನ-ನಾನೊಂದು ವೀರರಸ
ಸೃಷ್ಟಿಯೊಳೆ ಸಮರಸಂಚಾರವನ್ನೆಸಗಿದೆನು!
ಕಂಡೆನ್ನೈ!

ಹಳೆಯ ಮೂರ್ತಿಗಳೆಲ್ಲ ಹುರಿಗೊಂಡು-
ದ್ವಾಪರದ ತೆರೆಯ ಮರೆಯನ್ನೊದೆದು ಹೊರವಂದು,
ಕೆರಳಿ ಕುಣಿಯುತಲಿರುವ ಮತ್ತನೃತ್ಯವನೊಂದ!
ಮನವು ಮರುಳಾದತ್ತು! ಗಂಡೆದೆಯು ಗುಡುಗಿತ್ತು!
ಹಂತ ಹಾ! ವಿಷಮವಿಪ್ಲವದೊಳೆದೆ ಕುದಿದತ್ತು!

ಆ ರಾಜಕೀಯ ನಾಯಕರಲ್ಲಿ-
ಎದೆಗೊಟ್ಟು
ಎದುರಾಡಿ ಕಾದಿ ಗೆಲಿದವರುಂಟು, ಹಠತೊಟ್ಟು
ಪಂಥ ಪೌರುಷ ಮೆರೆಸಿ ಹೊಡೆದು ಮಡಿದವರುಂಟು,
ತಂತ್ರ ನೀತಿಯ ನಡೆಸಿ ಹೆಸರ ಹೊತ್ತವರುಂಟು,
ಆದರವರನು ಹೊಗಳಿ ಹಾಡುವೆನೆ? ಛಿ! ಸಲ್ಲ,
ನಿಃಸ್ವಾರ್ಥವೀರ ಕಲಿಕರ್ಣ ನಿನಗೆಣೆಯಿಲ್ಲ!

ನಿನ್ನ ಕಲಿತನಕೆ ತಲೆದೂಗಿರುವ ಕವಿಕುಲವು
ಕನ್ನಡದಿ ಕೆಲವುಂಟು, ನೀಂ ಚಿರವಿಭೂತಿಯೈ!
ವೀರರಸ ಗಟ್ಟಿಯುನು ವೀರವಾಣಿಯೊಳೊಡೆದ
ಕನ್ನಡದ ಕವಿಚಕ್ರವರ್ತಿ ರನ್ನನೆ ತಾನು

CC-0. Jangamwadi Math Collection. Digitized by eGangotri

ಕಲ್ಲೆದೆಯ ಕರಗಿಸುವ ಕರುಣೆಯಲಿ, ನಿನಗಾಗಿ
ಮರುಗಿರನೆ? ಪಂಪನಧಿಕಾರವಚನದೊಳಿಂತು
ಬೆಸಸಿರನೆ?–ನೆನೆಯುವೊಡೆ ಕಲಿಕರ್ಣನನೆ ನೆನೆಯು
ಬೇಕೆಂದು–ನಿನಗೆ ಸರಿದೊರೆಯ ಕಾಣದೆ ಮಹಾ–
ಭಾರತವ ಬೆಳಗಿರ್ದ ವೀರಾಧಿವೀರರಲಿ!

ಪಂಪರನ್ನರು ತಮ್ಮ ವಿಜಯ ವಾದ್ಯವ ಮೊಳಗಿ
ಭಾರತದ ವೀರವರ ವಿಕ್ರಮಾರ್ಜುನ ಸಾಹ-
ಸಿಕ ಭೀಮರಧಿಕ ಕಲಿತನವ ಕೊಂಡಾಡಿದರು ;
ಕವಿದಿದ್ದ ಕತ್ತಲೆಯ ಕೊಳೆ ತೊಳೆಯಲೆಂದಲ್ತೆ
ದೀಪವಂ ಪಿಡಿದೆತ್ತಿ ತೋರುವುದು? ಸೂರ್ಯ ಸಮ
ಸ್ವಪ್ರಕಾಶಂಗಿದಿರು ಕೈವೆಳಗ ಕಾಣಪರೆ ?

CC-0. Jangamwadi Math Collection. Digitized by eGangotri

ವೇದವ್ಯಾಸಗೆ

ವೇದಗಳ ಹಂಚಿಟ್ಟು ಹೆಸರಾಂತ ಋಷಿ ನೀನು
ಹೇ ವೇದವ್ಯಾಸಾರ್ಯ! ನಿನ್ನದಾದಿಮ ಕಾರ್ಯ-
ವೈ ಭುವನಕವನಸಂಗ್ರಹದಲ್ಲಿ, ಅಲ್ಲದೊಡೆ
ಈ ಚತುರ್ವೇದವಿದು, ಪೌರ್ವಸ್ತ್ಯ ಪೂರ್ವ ಸಂ-
ಸ್ಕೃತಿಸಾರ ಸರ್ವಸ್ವಾರಸ್ಯವಿದು, ಪ್ರಕೃತಿ ಮಾ-
ತೆಯು ಪ್ರೇಮದಾಮೋದದಾವೇಶಕಂದೊಲಿದ
ನಮ್ಮಾರ್ಯ ಋಷಿವರರ ಭಾವನಾಲಹರಿಯಿದು,
'ಚಿರಮಪೌರುಷಮ'ೆಂಬ ಘನತೆಯಂಗೊಳುತಿತ್ತೆ?

ಐದನೆಯ ವೇದವೆನೆ ವಿದಿತವೈ ನಿನ್ನ ಕೃತಿ
ಶ್ರೀ ಮಹಾಭಾರತವು, ನವಶಕ್ತಿಯುತಮಾದ
ಭವದೀಯಂ ಲೇಖನಿಯು, ಚಿರವಿನೂತನ ರಾಜ
ಕೀಯಂ ತತ್ವದ ಖನಿಯು–ಪಶುಪಂಥಮಂ ಮೆಟ್ಟಿ
ಮುರಿದಿಕ್ಕಿ ಸತ್ಯಧರ್ಮಕ್ಕೆ ಪಟ್ಟ ಕಟ್ಟಿಸಿದೆ;
ಭರತಪುತ್ರರ ಘೋಷವನು ಮುಗಿಲು ಮುಟ್ಟಿಸಿದೆ.

———

5 CC-0. Jangamwadi Math Collection. Digitized by eGangotri

ಸ್ವಗತ

ಕ್ರಾಂತಿ ಕಾಲದ ಕುಮಾರತನಾಗಿ ಹುಟ್ಟಿದೆನು–
ಮೊದಲಿನ ಮಹಾಯುದ್ಧ ಮುಸಗುವಂದು;
ಕ್ರಿಸ್ತಾಬ್ದ ಸಾಹಸ್ರದೊಂಬತ್ತುನೂರ ಹದಿ–
ನೈದನೆಯ ವರ್ಷದಲಿ ಜೂನೆಂಟರಂದು.

ನಿನ್ನೆ ನಾಂ ಬಾಲಕನು ಇಂದಿಗೂ ಬಾಲಕನೆ,
ವರುಷ ಮೂಹತ್ತು, ಬಳಿ ಬಂದಿತಲ್ಲ !
ಶತಮಾನದರ್ಧಾರ್ಧ ದಾಯುಷ್ಯ ದಾಂಟಿತೆನೆ–
ಇಂದಿಗೂ ನಿಜಮನುಜನಾಗಲಿಲ್ಲ !

ನಿಜಮನುಜನೆಂದೆನೆ? ನಿಜಕು ನಾಂ ಮನುಜನೆ?
ದೇಹಧರ್ಮವಿದೊಂದೆ ಮನುಜತ್ವವೇನು?
ಕಷ್ಟಗಳ ಸಹಿಸಲ್ಕೆ, ನಿಷ್ಠುರದಿ ನುರಿಯುಲ್ಕೆ,
ಬಾಳ್ವೆ ಹೋರಾಡಲ್ಕೆ-ಬಲ್ಲೆನೇನು?

ಎನ್ನ ಕೃತಿಗಳ ನೋಡಿ ಜಗವು ಮೆಚ್ಚುವುದಿರಲಿ
ಜಗವ ಮೆಚ್ಚಿಪೆನೆಂಬ ಹುಚ್ಚು ಹಿಡಿದಿಲ್ಲ ;
ಎನ್ನಾತ್ಮಸಂತೃಪ್ತಿಯೊಂದೆನಗೆ ಸಾಕಿಲ್ಲಿ
ಎನ್ನಿಂದಲೆನ್ನಾತ್ಮ ತೃಪ್ತಿ ಪಡೆದಿಲ್ಲ.

X X X X

ಹಸುರು ಹೊಲ ಬಯಲಲ್ಲಿ, ಗೊನೆಹಣ್ಣ ತೋಟದಲಿ,
ಕಲಕಲನಿನಾದದಿಂ ನದಿ ಹರಿಯುವಲ್ಲಿ,
ಗಿಡ ಬಳ್ಳಿಮರ ತುಂಬಿ ಚೆಲುಚೆಲ್ಲಿದೂರಿನಲಿ,
ತುಳುರಾಣಿ ತೊಟ್ಟಿಲಲಿ ಬಳೆದೆನದು–ಹಳ್ಳಿ.

CC-0. Jangamwadi Math Collection. Digitized by eGangotri

ಓ ಎನ್ನ ತಾಯ್ನೆಲವೆ! ತುಳುನಾಡ ಭೂದೇವಿ!
ನಿನ್ನ ಮರೆಯಲ್ಕುಂಟೆ ಜನ್ಮ ಜನ್ಮಂ?
ನಿನ್ನ ಪುಣ್ಯೋದರದಿ ಹೊತ್ತು ಸಲಹುವೆ ತಾಯೆ!
ಋಣವ ತೀರಿಸಲುಂಟೆ? ನಾನಂದೆ ಧನ್ಯಂ!

ಪಶ್ಚಿಮಾದ್ರಿಕಿರೀಟ ಧರಿಸಿ ಮೆರೆವಾ ಮಾತೆ!
ಸಾಗರನೆ ತವಪಾದ ತೊಳೆಯುತಿಹನು ;
ನೇತ್ರಾವತಿಯು ನೇತ್ರಧಾರೆಯೇನಿದು? ನೋವಿ-
ದೇತರಿಂದಾಯ್ತಮ್ಮ? ತಿಳಿಯೆ ನಾನು.

ವೀರರಂ ಪಡೆದುದಿಲ್ಲೆಂದಿಂತು ಮರುಕವೆ?
ಭಾರತಿಯ ಸಿರಿಕುವರಿ ನಿನಗಿದೇ ನೋವು!
ಕೈಕಾಲು ಬಿಗಿದ ಸಂಕಲೆಯು ಕಡಿವೆವು, ನೋಡು-
ಭರತಮಾತೆಗು ನಿನಗು ಕೂಡಿ ಮಂಗಳವು.

X X X X

ಹೇಳಿದೆನು-ನಾ ಹುಟ್ಟಿದೂರು ತುಳುನಾಡಿನಲಿ
ಪ್ರಕೃತಿ ಚೆಲುವನು ಚೆಲ್ಲಿದೊಂದು ಹಳ್ಳಿ;
ಗದ್ದೆಕೆಸರಲಿ ಕಾಡುಮುಳ್ಳಿನಲಿ ದುಡಿದುಡಿದು-
ನಮ್ಮ ಹಿರಿಯರ ಬಾಳ್ವೆ ಬೆಳಗಿತಲ್ಲಿ !

ಬೇಟೆ ಕಂಬಳ ಕೋಲ ತಾಳಮದ್ದಳೆಗಳಲಿ
ನಮ್ಮ ಹಿರಿಯರ ಹುರುಪು ನೋಡಬೇಕು!
ಅಶ್ವಧಾಟಿಯು ಹಿಡಿದು ನಮ್ಮಜ್ಜ ಜೈಮಿನಿಯು-
ಓದುತಿರೆ, ಸರಸತಿಯೆ ಕುಣಿಯಬೇಕು!

ಅಳಿಯಕಟ್ಟಿನ ಮನೆಗೆ ನಮ್ಮಜ್ಜ ಯಜಮಾನ,
ಮನೆ ತುಂಬ ಸಂಸಾರ, ಬಂಟ ಜಾತಿ ;

CC-0. Jangamwadi Math Collection. Digitized by eGangotri

ತುಳುನಾಡಿಗಿಳಿದೊಮ್ಮೆ ನಡೆದು ನೋಡಿರಿ, ಬನ್ನಿ!
ಬಂಟರೆಂದರೆ ತಿಳಿವಿರೆಷ್ಟು ಖ್ಯಾತಿ!

ಜಾತಿ ಮಾತನ್ನೆತ್ತಿ ಹಿಗ್ಗಿ ಹೇಳಿದೆನಿಲ್ಲ–
ನನ್ನ ಹಿನ್ನೆಲೆ ಬಾಳ್ವೆ ಚಿತ್ರಿಸಿದೆನು;
ಜಾತಿಯೊಂದೇ ನಾವು–ಮಾನವರು–ಹೆಚ್ಚಾಗೆ
ಭಾರತೀಯರು, ದಾಸ್ಯ ಹಾಸ್ಯ ಜೀವಿಗಳು!

X X X X

ನಮ್ಮ ತಾಯ್ ಹಿರಿಮಗಳ ಹಿರಿಸೋದರಳಿಯನಿಗೆ
ನಮ್ಮಜ್ಜ ಧಾರೆಯೆರೆದಿತ್ತ ಕತೆ ಹೇಳ್ವೆ;
ಒಂಬತ್ತು ವರ್ಷದಾ ಹುಡುಗಿ ತಾನಾಗೆಂದು
ಒಮ್ಮೊಮ್ಮೆ ಹೇಳ್ವರೆನ್ನಮ್ಮ ಬೆತೆಬಾಳ್ವೆ.

'ಊರಿಗೇ ಉಪಕಾರಿ, ಮನೆಗೊಂದು ಮಾರಿ'
ಎನುವಂತಿತ್ತು–ತಂದೆ ಗುಣವಂತೆ!
ಮಾವನೊಳು ಮಡದಿಯೊಳು ಜಗಳಾಡಿ ಹೊಡೆದಾಡಿ
ಸಂಸಾರ ಸುಖವೆಲ್ಲ ಕೆಡಿಸಿರುವರಂತೆ!

ಮೂರು ಮಕ್ಕಳ ತಾಯಿ ಪಡೆದರೂ, ನಾವಿಂದು
ಇಬ್ಬರೇ ಉಳಿದವರು; ನಮ್ಮಕ್ಕ–ನಾನು.
ತಂಗಿಯೋರ್ವಳ ಕಂಡ ಕನಸೊಂದು ಕಟ್ಟುತಿದೆ,
ಎಂಥ ಚೆಲುವಿನ ಕೂಸು ! ಬಾಳ್ವೆ ಕನಸೇನು?

ಎನ್ನ ಪ್ರೀತಿಸುವವರು, ನಾನು ಪ್ರೀತಿಸುವವರು,
ಇಬ್ಬರಿಂದಿಗೆ ಕಡಿಮೆಯೆಂದು ತಿಳಿದು ;
ತಂದೆಯಿದ್ದರೆ–ಈಗ–ತಂಗಿಯಿದ್ದರೆಯೆಂದು
ಒಮ್ಮೊಮ್ಮೆ ಕರುಳು ಹುಡುಕಾಡುತಿಹುದು!

X X X X

CC-0. Jangamwadi Math Collection. Digitized by eGangotri

ಮಧುರ ಮಧುರಂ ಬಾಲ್ಯಕಾಲವಾನಂದಮಯಂ !
ಮನವೆಲ್ಲ ನಿರ್ಮಲಂ ! ಸುಂದರಂ ಜಗವು !
ಹಗೆಯಿಲ್ಲ, ದಗೆಯಿಲ್ಲ, ಸಿಟ್ಟಿಲ್ಲ, ಗುಟ್ಟಿಲ್ಲ–
ಮಧುರ ಮಧುರಂ ಬಾಲ್ಯ ! ಹೋಯ್ತೆ? ಸೋಜಿಗವು !

ಪಾಟ ಬ್ರಾಹ್ಮಣರೊಡನೆ, ಆಟ ಹೊಲೆಯುವರೊಡನೆ,
ಓದುವುದು ಒತ್ತಾಯ, ಆಡುವುದೆ ಹಿತವು ;
ಗೆಳೆಯ ಹೊಲೆಯನ ಕಂಡು, ಸಾಲೆ ತಪ್ಪಿಸಿಕೊಂಡು,
ದನ ಮೇಯಿಸುತ ಬಂದ ದಿನವೆಂಥ ಸುಖವು !

ಒಳಗೆ ಹೊನ್ನೆಣ್ಣೆಯಲಿ ಮಿಣಿಮಿಣಿಯುತಿಹ ಸೊಡರು
ಅಂಗಳದಿ ತಿಂಗಳನು ಹಾಲು ಚೆಲ್ಲಿಹನು !
ಒಳಗಿರಲು ಮನವಿರದೆ, ಹೊರಗೆ ನಿದ್ರಿಸಬಿಡದೆ,
ಅಳುತ ಮಲಗಿದ ರಾತ್ರಿ ಕನಸು ಕಂಡಿಹೆನು !

ಬಂಗಾರದೊಂದು ಹಕ್ಕಿಯನೇರಿ, ಬಾನಿನಲಿ–
ಸುತ್ತಲೂ ಸುತ್ತಾಡಿ ಬಂದ ಸವಿ ಕನಸು ;
ಏನು ಸೊಗಸದು ! ಜೀವನದೊಳಿನ್ನು ಬರಲುಂಟೆ ?
ಸ್ವಪ್ನಮಯವೈ ಬಾಲ್ಯ ! ಸುಂದರಂ ನೆನಸು–

X X X X

ಹದಿನಾರು ವರ್ಷಗಳ ವರೆಗೆ ನಾನೊಮ್ಮೆಯೂ-
ತಲೆನೋವೆ ಕಂಡಿಲ್ಲ, ರೋಗರುಜೆಯಿಲ್ಲ ;
ಏಳು ತಿಂಗಳ ತನಕ ಹಿಡಿದ ಜ್ವರ ಬಿಡದೆನ್ನ–
ದೇಹವನು ದಂಡಿಸಿತು, ಮತ್ತೆ ಸುಖವಿಲ್ಲ.

ತಂದೆಯನು ಚಿಕ್ಕಂದಿನಲ್ಲೆ ಕಳಕೊಂಡಿಹೆನು,
ಮಾವ ಕಣ್ಮುಚ್ಚಿದರು, ನಮ್ಮಜ್ಜ ಬಳಿಕ ;
ಜೀವನದ ಕಹಿಯನ್ನು, ಸಾವು ನೋವುಗಳನ್ನು,
ಕಂಡುಂಡೆ ಬಳೆದಿಹೆನು-ಪಟ್ಟಿಹೆನು ಮರುಕ.

CC-0. Jangamwadi Math Collection. Digitized by eGangotri

ನೆನೆವೆನೆನ್ನಯ ಗೆಳೆಯಂ ನಂಬೂದಿರಿಯು, ಕೊನೆಯು–
ಪತ್ರ ಬರೆದೈ 'ಮಿತ್ರ ಬಾ ಮದುವೆಗೆ'ಂದು!
ಮದುವೆಯಾದೆಯಾ ? ಹಂತ ! ಗೆಳೆಯನನು, ಗೆಳತಿಯನಾ–
ಮರೆತೆ ಹೋದೆಯಾ ? ನೆನಪನುಳಿಸಿ ನೀಂ ಮುಂದು !

ಹುಟ್ಟುವುದೆ ಮೊದಲಾಗಿ, ಸಾಯುವುದೆ ಕೊನೆಯಾಗಿ,
ಮಾನವಂ ಜೀವನಂ ಮಾಡಬಲ್ಲ ;
ಬಾಳ್ವೆಯಂತರದಲ್ಲಿ ದಿನದಿನದ ಹೋರಾಟ-
ಹೊಡಿ, ಮುನ್ನುಗ್ಗಿದಗೆ-ಕೀರ್ತಿಯೆಲ್ಲ.

X X X X

ಹೇಳಿದೆನು–ನಾನು ಬ್ರಾಹ್ಮಣರೊಡನೆ ಕಲಿತುದನಂ;
ಸಂಸ್ಕೃತವನೋದಿದೆನು ಕನ್ನಡದ ಜತೆಗೆ ;
ಉಭಯ ಸಾಹಿತ್ಯಗಳ; ಬರಿಯ ಸಾಹಿತ್ಯಗಳ-
ಓದಿ ಸವಿ ಸವಿಯುವುದೆ ಹಿತವಾಯ್ತು ನನಗೆ.

ಸಕ್ಕದದ ಸಕ್ಕರೆಗೆ ಕನ್ನಡದ ಕತ್ತುರಿಯು–
ಸೇರಿದರೆ–ಸವಿಯುದನು ಕೇಳಬೇಕೆ ?
ವಾಲ್ಮೀಕಿ ಜತೆಯಲ್ಲಿ ಪಂಪನಂ ಕಲಿತಲ್ಲಿ
ಆಗುವಮಿತಾನಂದ–ಹೇಳಬೇಕೆ ?

ಕೇಶಿರಾಜನ ಕೂಡೆ ಪಾಣಿನಿಯಂ ಮುಗಿಸಿದೆನು,
ಹನುಮಂತ ಸಾಗರವ ದಾಂಟಿದಂತೆ !
ಕಡಲಿನಾಳದೊಳೇನು ಮೀನುಂಟೊ, ಮುತ್ತುಂಟೊ,
ವಾಯುಸುತ ಕಂಡನೆ? ವ್ಯಾಕರಣವಂತೆ !

ಕನ್ನಡದ ಕವಿರಾಜಮಾರ್ಗದಲಿ ನೋಡಿದೆನು
ಘರ್ಷಣೆಗಳಪ್ಪುದನು–ಹಿಗ್ಗಿ ಹೋದೆ !

CC-0. Jangamwadi Math Collection. Digitized by eGangotri

ಹಳೆಯ ಹಾದಿಯಂ ಬಿಟ್ಟು, ಹೊಸಪಂಥವಂ ತೊಟ್ಟು
ಹೋರಾಟಕಿಳಿದಲ್ಲಿ–ಯೋಧನಾದೆ !

X X X X

ಕನ್ನಡದ ಗಡಿನಾಡಿನಲ್ಲಿ ನಾ ಹುಟ್ಟಿರಲು
ಹೇಡಿಯೆನಿಸದೆ ಯೋಧನಾಗಬೇಕು;
ಕನ್ನಡಾಂತರ್ಗತಂ ತುಳುನಾಡು ನನ್ನದಿದು
ಭಾರತಾಂತರ್ಗತಂ ಕನ್ನಡದ ಬದುಕು.

ಮಲೆಯಾಳಿಗಳೊಳೆನಿತೊ ಮಿತ್ರರೆನಗಿಹರಿಂದು
ಕೇರಳದ ಕೂಡೆ ನಾ ಕಾದುವೆನೆ ಹೇಗೆ ?
ಒಂದೆ ಕನ್ನಡ ನಾಡು, ಒಂದೆ ಕೇರಳ ನಾಡು,
ಒಂದೆ ಭಾರತಮಾತೆ ಕಂದರಾವ್ ಕಡೆಗೆ.

ಕನ್ನಡದ ಕಾವ್ಯಗಳನೋದಿ ನಾಂ ಹೇಳುವುದು,
ಮಲೆಯಾಳ ಸಾಹಿತ್ಯ ಗೆಳೆಯ ನಾಯರನು ;
ಇಬ್ಬರೂ ಸಂತೋಷಗೊಂಡಿಹೆವು, ಕಂಡಿಹೆವು
ಕನ್ನಡಂ ಕೇರಳಂ ಕೂಡಿ ನಡೆವುದನು.

ಕನ್ನಡದ ಋಣವುಂಟು–ನಾಂ ಮರೆಯ ಬಲ್ಲೆನೆ?
ಆವ ಕಾಣ್ಕೆಯ ಕೊಟ್ಟು ತೀರಿಸುವೆನೊ?
ದಿನ ದಿನಂ ನಿಮಿಷ ನಿಮಿಷಂ ನೆನೆಯುತಿಹೆನಿದನೆ
ಸೇವೆ ಸಲಿಸುವೆ ದೇವಿ ಸಾಲದೇನೊ ?

Z X X X

ವಿಶ್ವಸಾಹಿತ್ಯ ಭಂಡಾರವನ್ನೊಡೆದೊಡೆದು–
ವಿಶ್ವ ಭಾರತಿ ಪೂಜೆ ಗೈವೆನೇನು ?
ವಿಶ್ವದ ವಿಶಾಲತೆಯ ಸಂಬಂಧ ಸಾಧಿಸಲು
ಆಂಗ್ಲಭಾಷೆಗೆ ಶರಣು ಹೋದೆ ನಾನು,

CC-0. Jangamwadi Math Collection. Digitized by eGangotri

ಇತಿಹಾಸ ವಿಜ್ಞಾನ ರಾಜಕೀಯಗಳನ್ನು
ಓದುತಿರೆ–ರೋಮಾಂಚವೇಳುತಿತ್ತು,
ಇಪತ್ತು ವರ್ಷದಾ ತಾರುಣ್ಯ ಕಾಲವದು
ಸ್ವಾತಂತ್ರ್ಯ ಸಂದೇಶ ಮೊಳಗುತಿತ್ತು !

ಹೊಡೆತಕ್ಕೆ ಹಣೆಕೊಟ್ಟು, ಸಿಡಿಗುಂಡಿಗೆದೆಗೊಟ್ಟು
ಹೆಣ್ಣೇನು, ಗಂಡೇನು, ನಗುತ ನಗುತ–
ಸೆರೆಮನೆಯ ಸಾಗುತಿಹರೀ ನೋಟ ನೋಡಿದರೆ
ಹೃದಯವಿದ್ದವ ಮರೆಯಲುಂಟೆ ಸತತ ?

ಸಾಹಿತ್ಯ ಸಂತೋಷ, ಸ್ವಾತಂತ್ರ್ಯ ಸಂದೇಶ
ಎನ್ನೆದೆಯನರಳಿಸಿದೆ, ಮನವ ಕೆರಳಿಸಿದೆ ;
ಕರ್ತವ್ಯ ಕರ್ಮದಲಿ ಕೈಹಾಕಿ ದುಡಿವಾಗ–
ದೌರ್ಬಲ್ಯ ಜಗ್ಗುತಿದೆ, ಮತಿಯ ಮರುಳಿಸಿದೆ.

X X X X

ಕವನಗಳ ಕಟ್ಟಿದೆನು, ಕಟ್ಟಿ ಬರೆದಿಟ್ಟಿದೆನು,
ಮೈಸೂರು ಬಿಟ್ಟು ಮಿಕ್ಕೆಲ್ಲ ಕಡೆಗು ;
ಅಚ್ಚಾಗಿ ಬರುವಾಗ ಹುಚ್ಚಾಗಿ ಹೋಗಿಹೆನು,
ನೆಲವ ಬಿಟ್ಟೇರಿಹೆನು–ಬಾನಿನೆಡೆಗು !

ಮೊದಲಿನೆನ್ನಯ ಕವನ ಮುದ್ರಣವ ಮುದ್ದಿಸುತ
ಬಂದದಿನವಿಂದಿಗೂ ನೆನಪುಳಿದಿದೆ ;
ನಾಡಿರಲಿ, ಕಾಡಿರಲಿ, ನರನೊ, ವಾನರನಿರಲಿ,
ಎಲ್ಲರೆದುರೊಳು–ಹಾಡಿ ಹಾಡಿ ನಲಿದೆ !

ನೆನೆದರೆಯೆ ನಾನಿಂದು ನಾಚುತಿಹೆ ! ನಿಜವಾಗಿ–
ಹುಚ್ಚು ಹುಚ್ಚಲ್ಲವೇ ಹುಡುಗಬುದ್ಧಿ ?

CC-0. Jangamwadi Math Collection. Digitized by eGangotri

ದಿನ ದಿನಂ ಕಳೆದಂತೆ–ವೈಜ್ವರಂ ಬಿಟ್ಟಂತೆ
ಹೆಮ್ಮೆಯಿಳಿಯಿತು ; ಹೊಂದಲುಂಟೆ ಸಿದ್ಧಿ ?

ನಾ ನಿರಾಶಾವಾದಿಯಲ್ಲ– ಮುಂದೊಂದು ದಿನ
ಶಕ್ತಿಯುತಸಾಹಿತ್ಯ ಸೃಷ್ಟಿಸುವೆನು ;
ಎನ್ನೆದೆಯ ತುಮುಲ ನಿಲ್ಲಿಸಲಾರೆನಿಲ್ಲದಿರೆ
ಎನ್ನಾತ್ಮನಿಗೆ ತೃಪ್ತಿ ಹುಟ್ಟಿಸುವೆನು.

X X X X

ಅನ್ನವನು, ಬಟ್ಟೆಯನು, ವಿದ್ಯೆಯನು, ಬುದ್ಧಿಯನು
ಕೊಟ್ಟ–ನಮ್ಮಜ್ಜ ಕಣ್ಮುಚ್ಚುವಾಗ,
ಜೀವನದ ಹೋರಾಟಕಿಳಿಯಲೇ ಬೇಕಾಯ್ತು,
ಪತ್ರಿಕೋದ್ಯೋಗ ದೊರಕಿತ್ತು ಬೇಗ.

ಊರೂರ ಸುದ್ದಿಗಳನೋದುವುದು ಬರೆಯುವುದು
ನಿಜವೆಷ್ಟೋ ಸುಳ್ಳೆಷ್ಟೋ ಯಾರು ಬಲ್ಲ ?
ಪರತಂತ್ರರೈ ನಾವು ಮಾತಿಗೂ ಬರೆಹಕೂ
ನಿರ್ಬಂಧ ಸಾವಿರವು-ಜೀವನವಿದಲ್ಲ.

ತುಂಬುಬಾಳುವೆ ಬದುಕಬೇಕು, ನಮ್ಮನು ಹಿಂಡಿ–
ಹಿಂದೆಳೆವ ಪಶುಶಕ್ತಿ ಮುರಿಯಬೇಕು ;
ಜೀವನದಿ ಹೋರಾಡಬೇಕು, ನಾವಿದರಲ್ಲಿ–
ಸೋತರೂ ಸೋಲಲ್ಲ-ಗೆದ್ದರದೆ ಬದುಕು !

ಭಾವನಾಮಯ ಜೀವನಂ ಯೌವನಂ-ಬಲ್ಲೆ,
ಭಾವನೆಗು ಬೆಲೆಯುಂಟು, ನಿಜವೆಂಬೆನು ;
ಸಂಸಾರಿ ಭಾವಿಕನು, ಸನ್ಯಾಸಿ ಭಾವಿಕನು,
ಭಾವನೆಯೆ ಬಲಿತಂದು ಕೃತಿಕಾಂಬೆನು.

CC-0. Jangamwadi Math Collection. Digitized by eGangotri

ಯೌವನದ ಹೆಸರೆತ್ತಿದಾಗ ನೆನಪಾಗುತಿದೆ–
ಭ್ರಮರಜೀವನವೊಂದು—ಪ್ರಕೃತಿಮಾಟ !
ಮುಚ್ಚಿ ಮರೆಸುವುದಿಲ್ಲ, ಬಿಚ್ಚಿ ತಿಳಿಸುವುದಿಲ್ಲ,
ತಪ್ಪೊ ಒಪ್ಪೋ ಹೇಳಿ ಹೆಣ್ಣುಕೂಟ ?

ಸ್ವರ್ಗಹೋಗಲಿ ಮತ್ತೆ ನರಕ ಬಂದರು ಬರಲಿ !
ಮುಂದೆ ಬಹ ಸಂಕಟಕೆ ತಲೆಯೊಡ್ಡುವೆ ?
ಇಂದೊಮ್ಮೆಯೆನ್ನೆದೆಗೆ ತೃಪ್ತಿ ದೊರಕುವುದುಂಟೆ ?
ಎಂದೆಂದಿಗೂ ನಗುತ ನರಕ ಪುಗುವೆ ?

ನಾಡುನುಡಿಗಳಿವೆರಡೆ ನನ್ನೆದೆಯುನರಳಿಸಿವೆ
ಧರ್ಮ–ದೇವಾಲಯುಗಳೆನಗೆ ದೂರ ;
ಅಜ್ಞಾನಿಯಿರಬಹುದು, ಅಪರಾಧಿಯಿರಬಹುದು,
ಮನಕೆ ಮೆಚ್ಚದ ಭಕ್ತಿಯೇನು ಸಾರ ?

ಸ್ವಗತಗಳ ನಾನಿಷ್ಟೆ ಹೇಳಿದೆನು, ಮುಂದೊಮ್ಮೆ–
ಆತ್ಮಗೀತವ ಹಿಗ್ಗಿ ಹಾಡಲುಂಟು ;
ಎನ್ನಲಿಹ ದೌರ್ಜನ್ಯವೆನ್ನೆದೆಯ ದೌರ್ಬಲ್ಯ
ಕಿತ್ತು–ಎದೆ ಹಿಗ್ಗಿ ನಾಂ ಹಾಡಲುಂಟು.

—

CC-0. Jangamwadi Math Collection. Digitized by eGangotri

ಹೊಸ ಹಾಡು

ನವಭಾವ-ನವಜೀವ-ನವಶಕ್ತಿ ತುಂಬಿಸುವ
ಹಾಡೊಮ್ಮೆ ಹಾಡಬೇಕು ;
ತೀವ್ರತರ ಗಂಭೀರ ಭಾವನೆಯ ತೆರೆ ಮಸಗಿ
ವೀರಧ್ವನಿಯೇರಬೇಕು ;
ಜಾತಿ-ಕುಲ-ಮತ-ಧರ್ಮಪಾಶಗಳ ಕಡಿದೊಗೆದು
ಎದೆಹಿಗ್ಗಿ ಹಾಡಬೇಕು ;
ಯುಗಯುಗಗಳಾಚೆಯಲಿ ಲೋಕಲೋಕಾಂತದಲಿ-
ಆ ಹಾಡು ಗುಡುಗಬೇಕು ;

೨

ಉನ್ನತೋನ್ನತ ಘನಹಿಮಾದ್ರಿಶಿಖರವನೇರಿ
ಹಾಡಲ್ಲಿ ಹಾಡಬೇಕು ;
ಹಾಡುನುಡಿಗುಂಡುಗಳು ಹಾರಿ ದಶದಿಕ್ಕಿನಲಿ
ಭಯವ ಬೆನ್ನಟ್ಟಬೇಕು ;
ಗಂಡೆದೆಯ ಗರ್ಜನೆಗೆ ಮೂಹತ್ತು ಮೂಕೋಟಿ
ಕಲಕಂಠ ಬೆರೆಸಬೇಕು ;
ಭೂಮ್ಯಂತರಾಳದಲಿ ನಭಚಕ್ರ ಗೋಳದಲಿ-
ಮಾರ್ದನಿಗಳೇಳಬೇಕು.

೩

ಜಡನಿದ್ರೆ ಸಿಡಿದೆದ್ದು ವೀರಾಟ್ಟಹಾಸದಲಿ
ಬಾನು ಭುವಿ ಬೆಳಗಬೇಕು ;
ನಡೆನುಡಿಗಳೆಡೆಯಲ್ಲಿ, ಪದತಾಳ ಗತಿಯಲ್ಲಿ-
ಕ್ರಾಂತಿಕಿಡಿ ಕೆರಳಬೇಕು ;

CC-0. Jangamwadi Math Collection. Digitized by eGangotri

033,1NKAx M3

ಅಳಿದುಳಿದ ಭವ್ಯತೆಯು ರುದ್ರಶಿಖಿಯುಜ್ವಲಿಸೆ
ಹಾಡುತಿದಿಯೊತ್ತಬೇಕು ;
ದಿವಸ ದಿವಸಗಳಿಂದ ಮನದಿ ಮರುಗುತಲಿದ್ದೆ-
ಹಾಡಿಂತು ಹಾಡಬೇಕು.

೪

ಎನ್ನ ಪಾಡಿಗೆ ದುಃಖ ತಾಯಿಗಿದು ಹಿರಿಮರುಕ
ನಾನಿದನು ಸಹಿಸಲೆಂತು ?
ಎನ್ನಕೃತಿಯುಪವಮಾನ ದೇವಿಗಿದೆ ದುಮ್ಮಾನ
ನಾನಿದನು ನೋಡಲೆಂತು ?
ಜಯ ಜನನಿ ! ಶಿರವೆತ್ತಿ ವೀರಭರವಸೆಯಿಂದ
ಹೊಸ ಹಾಡ ಕೇಳಿ ನೋಡು !
ಇದೊ ಮೊದಲು, ಮುನ್ನಿಲ್ಲ-ಮುಗಿದುದಂದಿನ ಪಾಡು,
ಹೊಸತಿಂದು ಹೊಸತು ಹಾಡು !

SRI JAGADGURU VISHWARADHYA
JNANA SIMHASAN JNANAMANDIR
LIBRARY.
Jangamwadi Math, VARANASI,
Acc. No. ~~.........~~
897
~~1006~~

CC-0. Jangamwadi Math Collection. Digitized by eGangotri

CC-0. Jangamwadi Math Collection. Digitized by eGangotri

CC-0. Jangamwadi Math Collection. Digitized by eGangotri

CC-0. Jangamwadi Math Collection. Digitized by eGangotri

ಮುಖಪುಟ ಚಿತ್ರ: ಕೃಷ್ಣ ಪೋತದಾರ್

ಮುದ್ರಣ: ಬೃಂದಾವನ ಪ್ರಿಂಟರ್ಸ್ ಅಂಡ್ ಪಬ್ಲಿಶರ್ಸ್ (ಪ್ರೈ.) ಲಿ, ಬೆಂಗಳೂರು – 560 004

CC-0. Jangamwadi Math Collection. Digitized by eGangotri